ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೫ನೇ ಸೆಪ್ಟೆಂಬರ್ ೧೯೯೧, ಭಾದ್ರಪದ ೧೪, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಅವಿಶ್ವಾಸ ನಿರ್ಣಯದ ಮೇಲಿನ ಮುಂದುವರಿದ ಚರ್ಚೆ

ಅಧ್ಯಕ್ಷರು : ಈಗ ಮಾನ್ಯ ಜಾಲಪ್ಪನವರು ಮಾತನಾಡಬಹುದು.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಸನ್ಮಾನ್ಯ ಅಧ್ಯಕ್ಷರೇ, ನನ್ನ ವಿರೋಧ ಪಕ್ಷದ ಗೆಳೆಯರು ಶ್ರೀ ಬಂಗಾರಪ್ಪನವರ ಸರ್ಕಾರದ ವೈಫಲ್ಯತೆಯ ಬಗ್ಗೆ ಈಗಾಗಲೇ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಹಿಂದೆಂದೂ ಯಾವ ಸರ್ಕಾರವೂ ಸಿಕ್ಕಿ ಹಾಕಿ ಕೊಂಡಿರದಷ್ಟು ಪ್ರಕರಣಗಳಲ್ಲಿ ಹಗರಣಗಳಲ್ಲಿ ಈ ಸರ್ಕಾರ ಸಿಕ್ಕಿಹಾಕಿಕೊಂಡಿದೆ ಹಾಗೂ ಬಹಳ ಪೇಚಿನಲ್ಲಿ ಈ ಸರ್ಕಾರ ಸಿಕ್ಕಿದೆ. ಈ ಸರ್ಕಾರ ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳಿಗೆ ಅತ್ಯಧಿಕವಾಗಿ ಹಣವನ್ನು ಕೊಡುವುದಕ್ಕೆ ಪ್ರಯತ್ನ ಪಟ್ಟು ಈ ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡಿದೆ. ದುರದೃಷ್ಟವಶಾತ್, ಯಾರು ಪಾರ್ಲಿಮೆಂಟ್ ಚುನಾವಣೆಯಿಂದ ಗೆದ್ದು ಬಂದಿದ್ದಾರೋ, ಅವರು ಸಹ ಇವರಲ್ಲಿ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಇವರ ಪಕ್ಷದವರು ಕೂಡ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಜನತೆಯಾದರೂ ಇವರಲ್ಲಿ ವಿಶ್ವಾಸ ಇಟ್ಟುಕೊಂಡಿದ್ದಾರೆಯೇ ಎಂದು ನಾನು ಈಗ ಯೋಚನೆ ಮಾಡುತ್ತಿದ್ದೇನೆ. ಮತ್ತು ನನ್ನ ಅನಿಸಿಕೆಗಳನ್ನು ಈ ಸಭೆಯ ಮುಂದಿಡುವುದಕ್ಕೆ ಪ್ರಯತ್ನ ಪಡುತ್ತೇನೆ. ಸನ್ಮಾನ್ಯ ಬಂಗಾರಪ್ಪನವರು ತಮ್ಮ ಬಜೆಟ್ ಭಾಷಣದಲ್ಲಿ ಹಲವಾರು ಭರವಸೆಗಳನ್ನು ಈ ರಾಜ್ಯದ ಜನತೆಗೆ ಕೊಟ್ಟರು. ಒಬ್ಬ ಸಮಾಜವಾದಿ ಮುಖಂಡರು ಈ ರಾಜ್ಯದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಏನಾದರೂ ಒಂದು ಹೊಸ ಆಯಾಮ ಈ ರಾಜ್ಯಕ್ಕೆ ಸಿಗಬಹುದು ಎಂದು ನಾವು ನಿರೀಕ್ಷಣೆ ಮಾಡಿದೆವು 5ತಿಂಗಳಾದರೂ ಕೂಡ ಒಂದು ಲವಲೇಶಾಂಶವೂ ಕಾಣಬರುತ್ತಿಲ್ಲ. ಮೊಟ್ಟಮೊದಲನೆಯದಾಗಿ, ರೈತರಿಗೆ ಪಾಸ್ ಬುಕ್‌ಗಳನ್ನು ಕೊಡುತ್ತೇವೆಂದು ಹೇಳಿದರು. ನಮ್ಮ ಸರ್ಕಾರ ಇದ್ದಾಗಲೇ ಒಂದು ಮಾಡಲ್ ಪಾಸ್ ಬುಕ್ ಮಾಡಿದ್ದೆವು. ಆದರೆ ಅದನ್ನು ಕೊಡಲಿಕ್ಕೆ ಆಗಿರಲಿಲ್ಲ. ಇವರಾದರೂ ಕೊಡುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದ ಪುಟ 3 ರಲ್ಲಿ ಈ ರೀತಿ ಹೇಳಿದ್ದಾರೆ.

" We have introduced agricultural pass books which will serve as a counter check to the entries made in the village Accountants' books".

ಆದರೆ ಇವತ್ತಿನವರೆಗೂ ಅದರ ಸುದ್ದಿ ಇಲ್ಲ. ಅದೇನಾದರೂ ಕೊಟ್ಟಿದ್ದರೆ ಬಹುಶಃ ಈಗ ಬಹಳ ಉಪಯೋಗಕ್ಕೆ ಬರುತ್ತಿತ್ತು. ಸಣ್ಣ ಮತ್ತು ಅತಿಸಣ್ಣ ರೈತರು ರೆವಿನ್ಯೂ ಅಧಿಕಾರಿಗಳ ಬಳಿ ಹೋಗಿ ತಿರುಗುವುದು ತಪ್ಪುತ್ತಿತ್ತು. ಅದನ್ನು ಕೂಡ ಅವರು ಕೊಡುವುದಕ್ಕಾಗಲಿಲ್ಲ. ಇದು ಸಣ್ಣ ವಿಷಯ ಆದರ ಜೊತೆಗೆ ಇನ್ನೊಂದು ವಿಷಯವನ್ನು ಹೇಳಿದರು. ಅದೇನೆಂದರೆ,

"Sections 94 and 95 of the Land Revenue Act have been amended to regulorise unauthorised cultivation subject to certain conditions and the inadequecy in the legal provisions". ಇದನ್ನು ಹೇಳಿ 5 ತಿಂಗಳು ಆಯಿತು ಇವತ್ತಿನವರೆಗೂ ಆ ಕಮಿಟಿಯನ್ನು ಮಾಡಲಿಲ್ಲ, ಅದರಿಂದ ಏನಾಗಿದೆ ಅಂದರೆ, ಗ್ರಾಮಮಟ್ಟದಲ್ಲಿ ಪುಡಾರಿಗಳು ಹುಟ್ಟಿಕೊಂಡು, ಎಲ್ಲೆಲ್ಲಿ ಸರ್ಕಾರದ ಜಮೀನುಗಳು ಇವೆ. ಗೋಮಾಳಗಳು ಇವೆ. ಅದನ್ನೆಲ್ಲಾ ನೀವು ಉತ್ತುಬಿಡಿ, ಈಗ ನಮ್ಮ ಸರ್ಕಾರ ಬಂದಿದೆ. ನಾವು ನಿಮಗೆ ಈ ಜಮೀನನ್ನು ರೆಗ್ಯುಲರೈಸ್ ಮಾಡಿಕೊಡುತ್ತೇವೆಂದು ಹೇಳುತ್ತಿರುವುದರಿಂದ ಪ್ರತಿಗ್ರಾಮದಲ್ಲಿಯೂ ಕೂಡ ಇವತ್ತು ಜಗಳ ಶುರುವಾಗಿದೆ. ಅದರ ಜೊತೆಗೆ ಮಂಡಲ ಪಂಚಾಯತಿಯವರು ಎಲ್ಲೆಲ್ಲಿ ಅಫಾರ್ ಸ್ಟೇಷನ್ ಮಾಡಬೇಕು. ಸೋಷಿಯಲ್ ಫಾರೆಸ್ಟರಿ ಮಾಡಬೇಕೆಂದು ಪ್ರಯತ್ನಪಟ್ಟು ಅರಣ್ಯ ಇಲಾಖೆಯವರಿಗೆ ಅವರ ಬುಲ್‌ಡೋಜರಿಗೆ ಹಣವನ್ನು ಕಟ್ಟಿಅವರು ಹೋಗಿ ಟ್ರೆಂಚ್ ತೆಗೆಯುವಾಗ ಪೋಲೀಸಿನವರು ಅವರಿಗೆ ಇವತ್ತು ಬಲಕೊಡುತ್ತಿಲ್ಲ. ಬೆಂಬಲ ಕೊಡುತ್ತಿಲ್ಲ, ರೆವಿನ್ಯೂ ಅಧಿಕಾರಿಗಳು ಕೂಡ ಬೆಂಬಲಕೊಡುತ್ತಿಲ್ಲ. ಹೀಗಾಗಿ ಪ್ರತಿಯೊಂದು ಊರಿನಲ್ಲೂ ಅನ್ ಆಥರೈಸ್ಡ್ ಕಲ್ಟಿವೇಷನ್ ಜಾಸ್ತಿಯಾಗಿದೆ. ಇವರ ವಿಫಲತೆಯಿಂದ ಊರು ಊರುಗಳಲ್ಲಿ ಇವತ್ತು ಜಗಳ ಪ್ರಾರಂಭವಾಗಿದೆ. ಇದನ್ನಾದರೂ 5 ತಿಂಗಳಿಂದ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಅಂದರೆ, ನಾವು ಅವರಿಂದ ಇನ್ನೇನು ನೀರಿಕ್ಷಣೆ ಮಾಡಬಹುದು. ಎಂಬುದನ್ನು ಅವರೇ ಹೇಳಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ : ಕಮಿಟಿಗಳು ಆಗಿವೆ.

ಶ್ರೀ ಆರ್.ಎಲ್. ಜಾಲಪ್ಪ : ನನಗೆ ಕಾಗದ ಬಂದಿರಲಿಲ್ಲ, ನನಗೆ ಅನುಮಾನ ಬಂದಿದೆ.

Just to ascertain myself,I went to Sri Kharge and asked him whether this is done. He said, it is not yet done. ನನಗೆ ಗೊತ್ತಿಲ್ಲ. ಅವರು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ. ನಮ್ಮದು ಏನಿದೆ ತಕರಾರು? ನಮ್ಮ ತಕರಾರು ಏನು ಇಲ್ಲ. ನಮ್ಮವರನ್ನು ಹಾಕಿ ಎಂದು ನಾವೇನು ಹೇಳುವುದಿಲ್ಲ. ನೀವು ಎಂತೆಂತಹವರನ್ನು ಹಾಕುತ್ತೀರಿ ಎನ್ನುವುದು ಗೊತ್ತು.

ಒಬ್ಬ ಮಾನ್ಯ ಸದಸ್ಯರು : ಈಗಾಗಲೇ ಯಾರು ಅನ್‌ಆಥರೈಸ್ಡ್ ಕಲ್ಟಿವೇಶನ್ ಮಾಡುತ್ತಿದ್ದಾರೆ, ಅವರೆಲ್ಲ ಅರ್ಜಿಗಳನ್ನು ಸರ್ಕಾರಕ್ಕೆ ಕಳುಹಿಸುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಅರ್ಜಿಗಳನ್ನು ಕಳುಹಿಸಬೇಕೆಂದು ಕೇಳಿದ್ದಾರೆ .ಅದಕ್ಕೋಸ್ಕರ ಅರ್ಜಿಗಳನ್ನು ಕಳುಹಿಸಿದ್ದಾರೆ.

ಒಬ್ಬ ಮಾನ್ಯ ಸದಸ್ಯರು: ಈಗಾಗಲೇ ಯಾರು ಅನ್‌ಆಥರೈಸ್ ಕಲ್ಟಿವೇಷನ್ ಮಾಡುತ್ತಿದ್ದಾರೆ, ಅವರೆಲ್ಲ ಅರ್ಜಿಗಳನ್ನು ಹಾಕಿಕೊಂಡು ಆಗಿದೆ. ಅರ್ಜಿಗಳನ್ನು ಪ್ರಿಸ್‌ಕ್ರೈಬ್ಡ್ ಫಾರಂನಲ್ಲಿ ಕಳುಹಿಸುತ್ತಿದ್ದಾರೆ.

ಶ್ರೀ ಕೆ.ಬಿ. ಕೋಳಿವಾಡ್: ನಾವು ಈಗಾಗಲೇ ಮೂರು ಮೀಟಿಂಗ್‌ಗಳನ್ನು ಮಾಡಿದ್ದೇವೆ. ನಮ್ಮ ಕಮಿಟಿ ರಚನೆಯಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ನನಗೆ ಅದು ಗೊತ್ತಿಲ್ಲ. ಮಾಡಿದರೆ ಸಂತೋಷ. ಆದರೆ ನಮ್ಮ ತಾಲ್ಲೂಕಿನಲ್ಲಂತೂ ಆಗಿಲ್ಲ, ಈಗ ನಾನು ಮಾನ್ಯ ಖಾರ್ಗೆಯವರನ್ನು ಕೇಳಿದೆ. ಅವರು ಇನ್ನೂ ಆಗಿಲ್ಲವೆಂದು ಹೇಳಿದರು.ಆದರೆ ನೀವು ಮೂರು ಕಮಿಟಿಯಾಗಿದೆ. ಎಂದು ಹೇಳುತ್ತಿದ್ದೀರಿ ಅದು ಎಷ್ಟರಮಟ್ಟಿಗೆ ಆಗಿದೆಯೋ ನನಗೆ ಗೊತ್ತಿಲ್ಲ ಅರ್ಜಿಯನ್ನು ಕರೆದಿದ್ದಾರೆ. ಅರ್ಜಿಯನ್ನು ತಹಶೀಲ್ದಾರ್ ರವರಿಗೆ ಕೊಡಬೇಕು ಅಷ್ಟೇ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ತಾಲ್ಲೂಕಿನಲ್ಲಿಯೂ ಕೂಡ ಏನೇನು ಆಗಿಲ್ಲ, ಆ ಸುದ್ದೀನೇ ಇಲ್ಲ, ನಮ್ಮಲ್ಲಿ ಯಾವ ಕಮಿಟಿಯನ್ನೂ ಮಾಡಿಲ್ಲ. ನಮ್ಮ ಗಮನಕ್ಕೂ ಬಂದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಎಲ್ಲೆಲ್ಲಿ ಕಾಂಗ್ರೆಸ್ ಸದಸ್ಯರು ಇದ್ದಾರೋ ಅಲ್ಲೆಲ್ಲ ಅವರು ಮೊದಲೇ ಕಮಿಟಿಗಳನ್ನು ಮಾಡಿಬಿಟ್ಟರಬೇಕೆಂದು ಕಾಣುತ್ತದೆ.

ಆಮೇಲೆ ಅಂಬೇಡ್ಕರ್ ಜನ್ಮ ಶತಾಬ್ಧಿಯ ಆಚರಣೆಯ ಅಂಗವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಕಲ್ಯಾಣ ಕಾರ್ಯಕ್ಕಾಗಿ 30 ಕೋಟಿ ರೂಪಾಯಿಗಳನ್ನು ಸರ್ಕಾರ ಪೂಲ್ ಮಾಡಿದೆ ಎಂದು ಹೇಳಿದ್ದೀರಿ.

" As part of Dr. Ambedkar's Birth Centenary celebrations, we have pooled resources from various sectors to the extent of Rs. 30 crores which will be utilised only for providing facilities to SC/STs."

ಈ 30 ಕೋಟಿ ಪೂಲ್ ಆಗಿರುವುದು ನಮಗೆ ಗೊತ್ತಾಗಿಲ್ಲ. ಇದರಲ್ಲಿ ಮೂವತ್ತು ಕಾಸು ಕೂಡ ಖರ್ಚಾಗಿಲ್ಲವೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ತಮ್ಮ ತಾಲ್ಲೂಕುಗಳಲ್ಲಿ ಏನಾದರೂ ಆಗಿದ್ದರೆ ತಾವು ಹೇಳಬಹುದು ತಮ್ಮ ತಾಲ್ಲೂಕುಗಳಲ್ಲಿ ಈ ಮೂವತ್ತು ಕೋಟಿ ರೂಪಾಯಿಗಳಲ್ಲಿ ಹರಿಜನ ಕಲ್ಯಾಣಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಎಂಬುದನ್ನು ತಾವು ಹೇಳಬಹುದು. ಆಮೇಲೆ ಪವರ್ ಜನರೇಷನ್ ಬಗ್ಗೆ ಹೇಳುವುದಾದರೆ, ಈ ವರ್ಷ 2257 ಮಿಲಿಯನ್ ಯೂನಿಟ್ಸನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದರು. ಜಾಸ್ತಿ ಮಾಡುವ ವಿಷಯ ಹಾಗಿರಲಿ, ಈಗ ಏನು ವಿದ್ಯುತ್ ಉತ್ಪಾದನೆ ಆಗುತ್ತಿದೆ, ಅದನ್ನು ಸರಿಯಾಗಿ ಸಪ್ಲೈ ಮಾಡುವುದಕ್ಕೆ ಶಕ್ತಿ ಇದೆಯೇ. ಯೋಗ್ಯತೆ ಇದೆಯೇ ಎಂದು ಹೇಳಬೇಕು. ಈ ವಿಷಯದ ಬಗ್ಗೆ ನಿನ್ನೆ ಮೊನ್ನೆಯೆಲ್ಲಾ ಗಲಾಟೆಯಾಗಿದೆ. ಇದು ಏನು ತೋರಿಸುತ್ತದೆ ಎಂದರೆ, ನಿಮ್ಮ ಅಸಮರ್ಥತೆಯನ್ನು ತೋರಿಸುತ್ತದೆ. ಇವನ್ನೆಲ್ಲಾ ಸರಿಯಾಗಿ ಮ್ಯಾನೇಜ್ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಾಗುವುದಿಲ್ಲ, ನೀವು ಯಾವುದೋ ಗೊಂದಲದಲ್ಲಿ ಸಿಕ್ಕಿಕೊಂಡು ನಿಮ್ಮನ್ನು ನೀವೇ ಬಿಡಿಸಿಕೊಳ್ಳಲಾರದಷ್ಟು ಸಮಸ್ಯೆಯಲ್ಲಿದ್ದೀರೇ ವಿನಃ ಜನಗಳ ಸಮಸ್ಯೆಗಳಿಗೆ ಗಮನ ಕೊಡಲು ನಿಮ್ಮಲ್ಲಿ ಶಕ್ತಿ ಇಲ್ಲ. ಎನ್ನುವುದನ್ನು ತೋರಿಸುತ್ತಿದ್ದೀರಿ ಎಂದು ನಾನು ಹೇಳಬಯಸುತ್ತೇನೆ. ಇದರ ಬಗ್ಗೆ ನಿನ್ನೆ ದಿವಸ ನನ್ನ ಸ್ನೇಹಿತರು ಮಾತನಾಡುವಾಗ ಎಚ್ಚರಿಕೆಯನ್ನು ಕೊಟ್ಟಿದ್ದಾರೆ, ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸಿ, ಕಡೇ ಪಕ್ಷ ಒಂದು ದಿನಕ್ಕೆ 18 ಗಂಟೆಗಳ ಕಾಲವಾದರೂ ಪವರ್ ಸಪ್ಲೈಯನ್ನು ಮಾಡದಿದ್ದರೆ, ಇವತ್ತು ಶ್ರೀನಿವಾಸಪುರದಲ್ಲಿ ಏನು ಆಗಿದೆ, ಅದು ಪ್ರತಿ ತಾಲ್ಲೂಕಿನಲ್ಲೂ ಆಗುತ್ತದೆ ಎಂದು ನಾನು ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತಿದ್ದೇನೆ. ನಿಮ್ಮ ಕೈಯಲ್ಲಿ ಆಗದಿದ್ದರೆ, ದಯವಿಟ್ಟು ಬಿಟ್ಟು ಹೋಗಿ, ಯಾರಾದರೂ ಸಾಮರ್ಥ್ಯವಿರುವವರು ಬಂದು ಇದನ್ನು ನಡೆಸಿಕೊಳ್ಳಲಿ. ಇನ್ನು ಎಂಪ್ಲಾಯ್‌ಮೆಂಟ್ ಜೆನರೇಷನ್ ಬಗ್ಗೆ ನೀವು ಹೇಳುತ್ತಾ, ವಿವಿಧ ಯೋಜನೆಗಳಡಿಯಲ್ಲಿ 15.4 ಕೋಟಿ ಮ್ಯಾನೇಡೇಸ್ ಎಂಪ್ಲಾಯ್‌ಮೆಂಟ್ ಕ್ರಿಯೇಟ್ ಮಾಡುತ್ತೇವೆಂದು ಹೇಳಿದ್ದೀರಿ. ನಿಮ್ಮ ಅದೃಷ್ಟ, ಚುನಾವಣೆ ಬಂತು. ಯಾರೂ ಇದರ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ. ಇಷ್ಟು ಕೆರೆಗಳ ಹೂಳು ತೆಗೆಸುತ್ತೇವೆ ಎಂದು ಹೇಳಿದಿರಿ. ಅಫಾರ್‌ಸ್ಟೇಷನ್ ಮಾಡಿಸುತ್ತೇವೆಂದು ಹೇಳಿದ್ದೀರಿ, ಸಾಯಿಲ್ ಕನ್‌ಸರ್ವೇಷನ್ ಮಾಡಿಸುತ್ತೇವೆಂದು ಹೇಳಿದ್ದೀರಿ .ಆದರೆ ಒಂದೂ ಅಭಿವೃದ್ಧಿ ಕೆಲಸ ಇವತ್ತು ನಡೆಯುತ್ತಾ ಇಲ್ಲ. ನನಗೆ ಆಶ್ಚರ್ಯ ಏನೆಂದರೆ, ಜನ ಇನ್ನೂ ನಿಮ್ಮ ಮೇಲೆ ರಿವೋಲ್ಟ್ ಆಗಿಲ್ಲವೇ ಎಂದು ಆಶ್ಚರ್ಯ.

ಶ್ರೀ ಜಿ. ಶಿವನಂಜಪ್ಪ : ಬಜೆಟ್‌ನಲ್ಲಿ ಏನು ಹೇಳಿದ್ದರು ಅದನ್ನು ಮಾಡಿಲ್ಲವೆಂದು

ಮಾನ್ಯ ಜಾಲಪ್ಪನವರು ಹೇಳುತ್ತಿದ್ದಾರೆ. ಇನ್ನೂ ಇಲಾಖೆಯ ಬೇಡಿಕೆಗಳೇ ಚರ್ಚೆಗೆ ಬಂದಿಲ್ಲ. ಹಣವನ್ನು ಮಂಜೂರು ಮಾಡಿಲ್ಲ. ಅಂದಮೇಲೆ ಅಲ್ಲಿ ಹಣವನ್ನು ಖರ್ಚು ಮಾಡುವುದು ಹೇಗೆ? ಇಂಪ್ರೂವ್‌ಮೆಂಟ್ ಮಾಡುವುದು ಹೇಗೆ? ಇದು ಅವಿಶ್ವಾಸ ನಿರ್ಣಯಕ್ಕೆ ಒಂದು ಅಂಶವೇ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಲೇಖಾನುದಾನದ ಪ್ರಕಾರ ಸೆಪ್ಟೆಂಬರ್ ಕೊನೆಯವರೆಗೂ ಖರ್ಚು ಮಾಡುವುದಕ್ಕೆ ತಮಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಬೇಡಿಕೆಯನ್ನೂ ಮಂಡಿಸುತ್ತಿರುವುದು ಈಗಲ್ಲ. ತಾವು ಹಿರಿಯ ಸದಸ್ಯರಾಗಿ ಇಂಥ ಸಣ್ಣಪುಟ್ಟ ವಿಷಯಗಳು ಗೊತ್ತಾಗದಿದ್ದರೆ, ನಿಮ್ಮ ಪರಿಸ್ಥಿತಿಯನ್ನು ನೋಡಿ ನಾನು ಸಂಕಟ ಪಡಬೇಕಾಗಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್: ಇನ್ನೂ ಜನ ಏಕೆ ರಿವೋಲ್ಟ್ ಆಗಿಲ್ಲ ಎಂದು ಹೇಳಿದ್ದೀರಿ.ನಿಮಗೆ ಅದರ ಅನುಭವ ಇದೆ. ನಿಮ್ಮ ವಿ.ಪಿ. ಸಿಂಗ್‌ರವರ ಸರ್ಕಾರದ ಮೇಲೆ ಜನ ಹೇಗೆ ರಿವೋಲ್ಟ್ ಆದರು ಎನ್ನುವ ಅನುಭವ ನಿಮಗೆ ಇದೆ. ಆದರೆ ಇಲ್ಲಿ ರಿವೋಲ್ಟ್ ಆಗುವುದಿಲ್ಲ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಹಾಗಾದರೆ,ಎಲ್ಲಾ ಸದಸ್ಯರು ರಾಜೀನಾಮೆ ಕೊಟ್ಟು ಪುನಃ ಚುನಾವಣೆಗೆ ಹೋಗೋಣ. ಒಂದು ವೇಳೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ,ನಾವು ಈ ಸದನದ ಒಳಗೆ ಬರುವುದಿಲ್ಲ. ರಾಜೀನಾಮೆ ಕೊಟ್ಟು ಹೋಗುತ್ತೇವೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಮಾನ್ಯ ಯಡಿಯೂರಪ್ಪನವರು ಎಷ್ಟು ಕ್ಷೇತ್ರಗಳಲ್ಲಿ ಎಷ್ಟು ಪಕ್ಷಗಳು ಎಷ್ಟೆಷ್ಟು ಮತಗಳನ್ನು ತೆಗೆದುಕೊಂಡಿವೆ ಎಂಬುದರ ಬಗ್ಗೆ ಹೇಳಿದ್ದಾರೆ. ಕಳೆದ ಲೋಕಸಭೆಯ ಚುನಾವಣೆಯಲ್ಲಿ ತಮ್ಮ ಪಕ್ಷಎಷ್ಟು ಕ್ಷೇತ್ರಗಳಲ್ಲಿ ಎಷ್ಟು ಮತಗಳನ್ನು ಪಡೆದು ಮುಂದಕ್ಕೆ ಬಂತು ಎಂಬುದನ್ನು ತಾವು ತಿಳಿದುಕೊಳ್ಳಬೇಕಾಗಿದೆ. ಮಾನ್ಯ ಚಂದ್ರೇಗೌಡರು ಬಂದು ತಮ್ಮ ಪಕ್ಷಕ್ಕಿರುವ ಜನ ಬೆಂಬಲದ ಬಗ್ಗೆ ಮಾತನಾಡಿದರು. ಆದರೆ ಅವರು ಅವರ ಕ್ಷೇತ್ರದಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. ಅವರಿಗೆ ಬಂದಿದ್ದು ಆರು ಸಾವಿರ ಮತಗಳು. ಅದರ ಬಗ್ಗೆ ಯೋಚನೆ ಮಾಡಿ. ಸುಮ್ಮನೆ ಜನ, ಎಂದು ಹೇಳಿದರೆ, ಜನ ಖಾಯಮ್ ಆಗಿ ನಿಮ್ಮ ಪರವಾಗಿ ಇರುತ್ತಾರೆಯೇ? ನಿಮ್ಮ ಪರವಾಗಿ ಜನ ಇಲ್ಲ ಎನ್ನುವುದನ್ನು ಸ್ವಲ್ಪ ಅರ್ಥಮಾಡಿಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಚಂದ್ರೇಗೌಡರು ಮೂರನೇಯ ಸ್ಥಾನಕ್ಕೆ ಬಂದಿದ್ದಾರೆ ಎಂದರು. ಸುಮಾರು ನೂರಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಸೋತಿದೆ ಎನ್ನುವುದು ನಿಮಗೆ ಜ್ಞಾಪಕದಲ್ಲಿದೆ.

ಶ್ರೀ ಆರ್.ಎನ್. ನಾಯಕ್ : ನಿಮ್ಮ ಪಕ್ಷದ ಬಗ್ಗೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ No confidence motion ಇರುವುದು ನಿಮ್ಮ ಸರ್ಕಾರದ ಮೇಲೆ, ನಮ್ಮ ಮೇಲಲ್ಲ.

ಶ್ರೀ ಆರ್.ಎನ್. ನಾಯಕ್ : ನಿಮ್ಮ ಕ್ಷೇತ್ರದ ಗತಿಯನ್ನು ನೋಡಿದರೆ ನಮಗೆ ಪಶ್ಚಾತ್ತಾಪವಾಗುತ್ತದೆ. ಇಷ್ಟು ದೊಡ್ಡ ಲೀಡರ್ ಇರುವ ಕ್ಷೇತ್ರದಲ್ಲಿ ಕಳೆದ ಸಾರಿ ಆರು ಸಾವಿರ ಓಟನ್ನು ಪಡೆದಿಲ್ಲ. ಮತ್ತೆ ತಾವು ಏನೆಲ್ಲಾ ಮಾತನಾಡುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಇದು ಯಡಿಯೂರಪ್ಪನನ್ನು ಮುಗಿಸಬೇಕೆಂದು ನಡೆದದ್ದು. ಶಿವಮೊಗ್ಗ ಜಿಲ್ಲೆಯಲ್ಲಿ ಓಟು ಹೆಚ್ಚು ಕಡಿಮೆಯಾಯಿತು. ಎಂದರೆ, ಅದು ಯಡಿಯೂರಪ್ಪನನ್ನು ಮುಗಿಸುವುದಕ್ಕೋಸ್ಕರ ನಡೆದಿರತಕ್ಕಂಥಾದ್ದು, ತುಂಬ ಒಳ್ಳೆಯದಾಗಿದೆ. ಅದಕ್ಕೆ ಬೇರೆ ಕಾರಣಗಳು ಇವೆ.

ಶ್ರೀ ಆರ್.ಎನ್. ನಾಯಕ್ ಇಷ್ಟು ಹೋತ್ತು ನೀವೇನು ಮಾಡಿದಿರಿ ಇಲ್ಲಿಯವರೆಗೆ ರಾಮನ ಬಾಣ ಹಿಡಿದು ಓಟು ಹಾಕಿಸುವುದಕ್ಕೆ ಪ್ರಚಾರ ಪಡೆದಿರಿ. ಈಗ ನೀವು ಯಡಿಯೂರಪ್ಪ ಎಂದು ಇಲ್ಲಿ ಶುರು ಮಾಡಿದಿರಿ ಅಂದರೆ, ಈಗ ರಾಮನನ್ನು ಮರೆತರು ಓಟು ಬಿದ್ದದ್ದು ಶ್ರೀ ರಾಮಚಂದ್ರನಿಗೆ ಜನರಿಗೆ ಮೋಸ ಮಾಡಿದ್ದಕ್ಕೆ ಅದು ಶ್ರೀ ರಾಮಚಂದ್ರನಿಗೆ ಬಿತ್ತು. ನೀವೊಬ್ಬರೆ ಸಿಂಗಲ್ಲಾಗಿ ಯಡಿಯೂರಪ್ಪ ಎಂದು ಹೋದರೆ ಓಟೇ ಬರುವುದಿಲ್ಲ. ಹಿಂದೆ ನಿಮ್ಮ ಪಕ್ಷಕ್ಕೆ ಎಷ್ಟು ಓಟು ಬಿದ್ದಿದೆ? ಈಗ ಶ್ರೀ ರಾಮಚಂದ್ರನಿಗೆ ಬಿದ್ದರೆ ನಾವೇನು ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನರು ಸಿದ್ಧಾಂತಗಳನ್ನು ಒಪ್ಪಿ ಓಟು ಕೊಟ್ಟಿದ್ದಾರೆಯೇ ಹೊರತು ಯಡಿಯೂರಪ್ಪ ಏನೇನೂ ಅಲ್ಲ. ನಾನೊಬ್ಬ ಸಾಮಾನ್ಯ ವ್ಯಕ್ತಿ.ಆದರೆ, ಪ್ರಶ್ನೆ ಏನೆಂದರೆ, ರಾಮನ ಹೆಸರು ಹೇಳುವುದಕ್ಕೆ ಶುರು ಮಾಡಿದ ನಂತರ ಕೊನೆ ಪಕ್ಷ ತಾಂಡಾ ಮತ್ತು ನಮ್ಮ ಹರಿಜನ ಕಾಲೋನಿಯಲ್ಲಿ ಹಾಳಾಗಿದ್ದಂತಹ ದೇವಸ್ಥಾನಗಳು ಜ್ಞಾಪಕಕ್ಕೆ ಬಂದಿದೆಯಲ್ಲ, ಅದಕ್ಕಾಗಿ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಆರ್.ಎನ್. ನಾಯಕ್ : ನಮ್ಮಂಥವರನ್ನು ದೇವಸ್ಥಾನದೊಳಗಡೆ ಬಿಡದೇ ಇದ್ದವರು ನೀವು. ಅಂಥ ನೂರಾರು, ಸಾವಿರಾರು ದೇವಸ್ಥಾನಗಳು ಈ ರಾಜ್ಯದಲ್ಲಿವೆ. ದೇವಸ್ಥಾನಗಳ ಕಥೆ ಹೇಳುವುದಕ್ಕೆ ಹೊರಟಿದ್ದಾರೆ. ನೀವು ದೇವಸ್ಥಾನದಲ್ಲಿ ಶೂದ್ರರನ್ನು ಹಿಂದುಳಿದವರನ್ನು ಹರಿಜನರನ್ನು ಇನ್ನೂ ಬಿಡುತ್ತಿದ್ದೀರಾ ಪೂಜಾರಿ ಕೆಲಸ ನಿಮ್ಮದೇ, ತೆಗೆದುಕೊಳ್ಳುವ ಕೆಲಸ ಏನೇ ಇದ್ದರೂ ನೀವು ಮಾಡಿದ್ದೀರಿ. ಇಂತಹ ಯಾವ ಜನರನ್ನು ನೀವು ದೇವಸ್ಥಾನದೊಳಗೆ ಬಿಟ್ಟಿದ್ದೀರಿ? ಮತ್ತೆ ದೇವಸ್ಥಾನಗಳ ಕಥೆ ಹೇಳುತ್ತೀರಿ. ಎಲ್ಲಾ ಜನಗಳಿಗೆ ಒಂದು ಧಾರ್ಮಿಕ ಹಕ್ಕು ಸಿಗದೇ ಹೋದಂಥ ದೇವಸ್ಥಾನಗಳು ಇದ್ದರೆ, ಮೊದಲು ಆ ದೇವಸ್ಥಾನಗಳನ್ನು ಒಡೆದು ಆಚೆಗೆ ಬಿಸಾಡಬೇಕು. ಅಂತಹ ದೇವಸ್ಥಾನವನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ? ನಮಗೆಲ್ಲಾ ಒಳಗೆ ಹೋಗುವುದಕ್ಕೆ ಅವಕಾಶವಿದ್ದರೆ, ಆ ದೇವಸ್ಥಾನಗಳು ರಾಜ್ಯದಲ್ಲಿ ಇರಲಿ ಇಲ್ಲದೆ ಹೋದರೆ ಆ ದೇವಸ್ಥಾನವನ್ನು ಒಡೆದುಹಾಕಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಚುನಾವಣೆ ಬಗ್ಗೆ ಬಹಳ ಜನ ಮಾತನಾಡುತ್ತಿದ್ದಾರೆ. ಇವರೆಲ್ಲಾ ಕಳೆದ ಚುನಾವಣೆ ಅಥವಾ ಹಿಂದೆ ನಡೆದ ಚುನಾವಣೆಗಳ ಭ್ರಮೆಯಲ್ಲಿದ್ದಾರೆಂದು ನನಗನ್ನಿಸುತ್ತದೆ. ಏಕೆಂದರೆ, ರಾಮನಿಗೆ ಓಟು ಬಂತೆಂದು ಕೆಲವರು ಹೇಳುತ್ತಿದ್ದಾರೆ. ನಾವು ರಾಜೀವಗಾಂಧಿ ಸತ್ತದ್ದಕ್ಕೆ ಮತದಾನ ವ್ಯತ್ಯಾಸವಾಯಿತು ಎಂದು ಹೇಳುತ್ತಿದ್ದೇವೆ. ಸಾಮಾನ್ಯ ಜನರು ನಾವು ಯಾರಿಗೂ ಓಟು ಹಾಕಿಲ್ಲ. ಹೆಂಡಕ್ಕೆ, ಹಣಕ್ಕೆ ಹಾಕಿದ್ದೇವೆಂದು ಹೇಳುತ್ತಿದ್ದಾರೆ. ಆದಕಾರಣ ಚುನಾವಣೆ ಎನ್ನುವ ಭ್ರಮೆಯಲ್ಲಿ ಏಕಿದ್ದೀರಿ ಎಂದು ನನಗಂತೂ ಗೊತ್ತಾಗುತ್ತಿಲ್ಲ. ಓಟು ಬಿದ್ದಿರುವುದು ರಾಮನಿಗೆ, ಇಲ್ಲಾ ರಾಜೀವ್ ಗಾಂಧಿಗೆ, ಇಲ್ಲಾ ಹಣಕ್ಕೆ, ಇಲ್ಲಾ ಸಾರಾಯಿಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಂಜುಂಡಸ್ವಾಮಿಯವರು ಹಿರಿಯರಾಗಿದ್ದಾರೆ. ಅವರ ಮಾತು ಇಡೀ ರಾಜ್ಯದ ಮತದಾರರಿಗೆ ಅಪಮಾನದ ಮಾತಾಗಬಹುದು. ಕೆಲವು ಭಾವನೆಗಳನ್ನು ವ್ಯಕ್ತಪಡಿಸತಕ್ಕ ಸಂದರ್ಭದಲ್ಲಿ ಅವರು ಹೇಳಿದ್ದನ್ನು ತಪ್ಪೆಂದು ಹೇಳುವುದಿಲ್ಲ, ಜನರು ಮೆಚ್ಚುವರು ಆಗಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಾನು ಮತದಾರರ ಎದುರಿಗೇ ಹೇಳುವುದನ್ನು ನಾನು ಹೆದರುವವನಲ್ಲ ಮತದಾರನನ್ನು ಗುಣಾತ್ಮಕವಾಗಿ ಪರಿವರ್ತನೆ ಮಾಡಬೇಕು. ಎಂದು ಕೆಲಸ ಮಾಡುತ್ತಿರುವವನು ನಾನು. ಆದುದರಿಂದ ಇದನ್ನು ಹೇಳುವುದರಲ್ಲಿ ನಾನೇನು ಭಯ ಪಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ರಾಜ್ಯದ ಮತದಾರನು ಇವೊತ್ತಿನ ದಿವಸ ರಾಜಕೀಯವನ್ನು ಅರ್ಥಮಾಡಿಕೊಂಡು, ಪಕ್ಷದ ಸಿದ್ಧಾಂತವನ್ನು ಅರ್ಥಮಾಡಿಕೊಂಡು ಓಟು ಮಾಡುವಂಥ ಪ್ರೌಢತೆ ಪಡೆದಿದ್ದಾನೆ. ಆದರೆ ಅವರು ಇದನ್ನು ಸಾರಾಸಗಟಾಗಿ ಹೇಳುವಂಥಾದ್ದು ರಾಜ್ಯದ ಮತದಾರನಿಗೆ ಅಪಮಾನ ಮಾಡಿದಂತಾಗುತ್ತದೆ. ತಾವು ಹೇಳುವುದು ನಿಜ. ಮತವನ್ನು ರಾಮನ ದೃಷ್ಟಿಯಿಂದ ಕೊಟ್ಟಿರಬಹುದು. ರಾಜೀವಗಾಂಧಿಯ ಅನುಕಂಪದಿಂದ ಓಟು ಬಂದಿರಬಹುದು. ನಾನು ಹೇಳುವುದಿಲ್ಲ, ಹೆಂಡ ಸಾರಾಯಿಗೂ ಸ್ವಲ್ಪ ಓಟು ಬಂದಿರಬಹುದು. ಆದರೆ, ಇಡೀ ರಾಜ್ಯದ ದೇಶದ ಮತದಾರರನ್ನು ಈ ದೃಷ್ಟಿಕೋನ ಇಟ್ಟುಕೊಂಡು ಅವಹೇಳನ ಮಾಡುವಂಥಾದ್ದು ಸರಿಯಲ್ಲವೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಜಾತಿಗೆ ಓಟು ಹಾಕಿದ್ದಾರೆ. ನಮಗೆ ಯಾರಿಗೂ ಓಟು ಹಾಕಿಲ್ಲ, ಇಲ್ಲಿ ಎಷ್ಟೋ ಕಡೆ, ಎಷ್ಟೋ ಸೀಟುಗಳಲ್ಲಿ ಸಾರಾಯಿ ಬಾಟಲಿಗಳು ಬಂದು ಕೂರಬೇಕು. ನಾವು ಸುಮ್ಮನೆ ಬೇನಾಮಿ ಬಂದು ಕುಳಿತಿದ್ದೇವೆ.

ಶ್ರೀ ಕೆ. ಎಸ್. ಈಶ್ವರಪ್ಪ : ಅಧ್ಯಕ್ಷರೇ, ಒಂದು ಅಂಶ, ನಂಜುಂಡಸ್ವಾಮಿಯವರು ಗೆದ್ದು ಬಂದಿದ್ದಾರೆ, ಅವರಿಗೂ ಇದು ಅನ್ವಯಿಸುತ್ತದೆಯೇ? ಎಂಬುದು ನನ್ನ ಪ್ರಶ್ನೆ. ಜಾತಿ, ಸಾರಾಯಿ, ಹೆಂಡ ಇವುಗಳಿಂದ ಗೆದ್ದಿದ್ದಾರಲ್ಲ, ಇದೇ ಲೆಕ್ಕದಲ್ಲಿ ಅವರು ಗೆದ್ದಿದ್ದಾರೆಯೇ ಎಂದು ನಮಗೆ ಅನುಮಾನ. ನಾವು ಧೈರ್ಯವಾಗಿ ಹೇಳುತ್ತೇವೆ. ರಾಮನಿಂದ ನಮಗೆ ಓಟು ಬಂದಿರುವುದು. ನಿಜ. ನಮ್ಮ ಸಿದ್ಧಾಂತಕ್ಕೆ ಓಟು ಬಂದಿರುವುದು ನಿಜ, ಬಿಜೆಪಿಗೆ ಓಟು ಕೊಟ್ಟಿದ್ದಾರೆ. ಇದನ್ನು ನಾವು ಹೇಳುತ್ತೇವೆ. ಅವರು ಹೇಳಿದ ಹಾಗೆ ಚುನಾವಣೆಗಳಲ್ಲಿ ಈ ರೀತಿಯ ಅನ್ಯಾಯ, ಭ್ರಷ್ಟಾಚಾರವಾಗಿದೆಯೆಂದು ನಾವು ಒಪ್ಪುತ್ತೇವೆ. ಆದರೆ, ಹೆಚ್ಚಿನ ಅಂಶ ಜನರು ತತ್ವ - ಸಿದ್ಧಾಂತವನ್ನು ಒಪ್ಪುತ್ತಿದ್ದಾರೆ. ಅದನ್ನು ಕೂಡಾ ನಾವು ಒಪ್ಪುತ್ತಿದ್ದೇವೆ. ಏಕೆಂದರೆ, ನಂಜುಂಡಸ್ವಾಮಿಯವರು ಕೂಡಾ ವಿಧಾನಸಭೆಗೆ ಗೆದ್ದು ಬಂದಿದ್ದಾರೆ. ಅವರು ಕೂಡಾ ಹಣ, ಹೆಂಡ, ಜಾತಿ ಇವುಗಳ ಮುಖಾಂತರ ಬಂದಿದ್ದಾರೆಂಬುದನ್ನು ಒಪ್ಪಿಕೊಳ್ಳುತ್ತಾರೆಯೇ, ಎನ್ನುವುದು ನನ್ನದೊಂದು ಪ್ರಶ್ನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಾವು ಯಾವ ರೀತಿ ಚುನಾವಣೆ ಮಾಡುತ್ತಿದ್ದೇವೆ ಎನ್ನುವುದು ಹಲವಾರು ಜನ ನಮ್ಮ ಗೆಳೆಯರಿಗೆ ಗೊತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಚುನಾವಣೆಯನ್ನು ಯಾವ ರೀತಿಯಾದರೂ ಮಾಡಿರಬಹುದು. ಆದರೆ ನಾವೆಲ್ಲರೂ ಯಾವ ರೀತಿಯಿಂದ ಗೆದ್ದು ಬಂದಿದ್ದೇವೆ ಎನ್ನುವುದು ಮುಖ್ಯ ಚುನಾವಣೆ ಯಾವ ರೀತಿಯಾದರು ಮಾಡಬಹುದು. ಆದರೆ ನಾವು ನಾವು ನಮ್ಮೊಳಗೆ ಪ್ರಶ್ನೆ ಮಾಡಿಕೊಳ್ಳೋಣ ನಾವು ನಮ್ಮ ಆತ್ಮ ಸಂಶೋಧನೆಯನ್ನು ಮಾಡಿಕೊಳ್ಳೋಣ. ಮೊದಲು ನಮ್ಮ ಆತ್ಮ ಸಂಶೋಧನೆ ಮಾಡಿಕೊಂಡು ಆಮೇಲೆ ಜನರಲ್ಲಾಗಿ ಮಾತನಾಡುವುದು ಒಳ್ಳೆಯದು. ಏಕೆಂದರೆ, ನಾವು ಯಾವುದೇ ವಿಧಾನವನ್ನು ಉಪಯೋಗ ಮಾಡಿಕೊಳ್ಳಬಹುದು. ಆದರೆ ಜನ ಯಾವುದನ್ನು ನಂಬಿ ಓಟು ಮಾಡಿರುತ್ತಾರೆ. ಅದು ಮುಖ್ಯ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಾನು ಇದು ಸಿಟ್ಟಿನಿಂದ ಹೇಳುತ್ತಿರುವ ಮಾತಲ್ಲ, ಬಹಳ ದುಖಃದಿಂದ ಹೇಳುತ್ತಿರುವ ಮಾತು. ನಾವು ಯಾವ ಸ್ಥಿತಿಯಲ್ಲಿದ್ದೇವೆ

ಎನ್ನುವುದರ ಬಗ್ಗೆ ಹೇಳುತ್ತಿದ್ದೇನೆಯೇ ಹೊರತು ಯಾರನ್ನೂ ದೂಷಿಸುತ್ತಿಲ್ಲ. ಮತ್ತೆ ಮತದಾರರ ಮನಸ್ಸಿಗೆ ಬೇಜಾರಾಗುತ್ತದೆಂದು ಇರುವ ವಿಚಾರವನ್ನು ಮುಚ್ಚಿಡುವ ಅವಶ್ಯಕತೆಯೂ ಇಲ್ಲ ಮತದಾರರ ಮುಖಕ್ಕೆ ನಾವು ನೇರವಾಗಿ ಹೇಳಬೇಕಾಗಿದೆ, ಅವರನ್ನು ಗುಣಾತ್ಮಕವಾಗಿ ಪರಿವರ್ತನೆ ಮಾಡಬೇಕಾಗಿದೆ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜುಂಡಸ್ವಾಮಿಯವರು ಬಹಳ ಹಿರಿಯರು, ಅವರು ಪ್ರೊಫೆಸರ್ ಕೂಡ ಹೌದು. ಆದರೆ ಮತದಾರರು ಈಗಾಗಲೆ ಬಹಳ ಬುದ್ಧಿವಂತರಾಗಿದ್ದಾರೆ. ಚುನಾವಣೆಯ ವ್ಯವಸ್ಥೆ ಬಂದು ಬಹಳ ವರ್ಷ ಕಳೆದಿದೆ. ಕಳೆದ ಸಾರಿ ಈ ಕಡೆ ಕುಳಿತಿದ್ದವರು. ಆ ಕಡೆ ಕುಳಿತಿದ್ದರು ಅವರು ಏನು ತಪ್ಪು ಮಾಡಿದ್ದರು, ತಕ್ಷಣದಲ್ಲಿ ಅವರನ್ನು ಈ ಕಡೆ ಕೂರಿಸಿ ಕೆಲವರನ್ನು ಆ ಕಡೆ ಕೂರಿಸಿದರು. ಹಾಗಾಗಿ ಮತದಾರರು ಕೇವಲ ಹೆಂಡ ಮತ್ತು ಸಾರಾಯಿ ಅಥವಾ ರಾಮದೇವರ ಹೆಸರಿನಲ್ಲಿ ಯಾವಾಗಲೂ ಮೋಸ ಹೋಗಲಿಲ್ಲ. ಮತದಾರರು ತೀರ್ಮಾನ ತೆಗೆದುಕೊಳ್ಳತಕ್ಕ ಒಂದು ಗುಣವನ್ನೂ ಸಹ ಕಲಿತಿದ್ದಾರೆ. ಆದ್ದರಿಂದ ನಾವು ಮತದಾರರನ್ನು ಬಹಳ ಸಣ್ಣತನದಿಂದ ಯೋಚನೆ ಮಾಡಿ ಕಡೆಗಣಿಸಿ ಹೇಳುವುದು ಯೋಗ್ಯವಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಆರ್.ಎಲ್. ಜಾಲಪ್ಪ : ನಿಜ, ಕರಿಯಣ್ಣನವರು ಹೇಳುವುದರಲ್ಲಿ ಅರ್ಧದಷ್ಟಾದರೂ ನಿಜವಿದೆ. ನಾವು ಮಾಡಿದ ತಪ್ಪಿನಿಂದ ಅಲ್ಲಿಂದ ಈ ಕಡೆಗೆ ಬಂದಿದ್ದೇವೆ. ನಾವು ಹಿಂದಿನ ಸರ್ಕಾರದಲ್ಲಿ ಸೊಕ್ಕಿನಿಂದು ಜಾತಿ ಕೆಡಿಸಿಕೊಂಡು ಸೋತೆವು. ನೀವು ಕಾಡಾನೆಗಳನ್ನು, ಘೇಂಡಾ ಮೃಗಗಳನ್ನು ನುಂಗಿ ಬಿಟ್ಟು ಇನ್ನೂ ಅರಗಿಸಿಕೊಳ್ಳುತ್ತಿದ್ದೀರಿ. ಎಷ್ಟು ದಿನ ನಡೆಯುತ್ತದೊ ನಡೆಯಲಿ, ನೋಡೋಣ. ಎರಡನೆಯದಾಗಿ, ಅಲ್ಪಸ್ವಲ್ಪ ಹಗರಣದಲ್ಲಿ ಅದನ್ನು ಬೃಹದಾಕಾರವಾಗಿ ಮಾಡಿದ್ದೀರಿ. ಈಗ ನಿಮ್ಮ ಮೇಲೆಯೋ ಬಂದಿರುವುದರಿಂದ ನೀವು ತಡೆದುಕೊಳ್ಳಿ.

(ಗೊಂದಲ)

ಶ್ರೀ ಆರ್. ಜಾಲಪ್ಪ : ಮೊನ್ನೆಯ ಚುನಾವಣೆಯ ವಿಜಯ ಬಹುಶಃ ಇವರ ತಲೆಗೆ ನಿಷ ಹೋಗಿಬಿಟ್ಟಿದೆ. ಸ್ವಾಮಿ ಮೊನ್ನೆಯ ಚುನಾವಣೆ ನಿಜವಾಗಿ ಚುನಾವಣೆಯಲ್ಲ, 26ನೇ ತಾರೀಖು ಚುನಾವಣೆಯಾಗಿದ್ದರೆ ನಿಮ್ಮ ಯೋಗ್ಯತೆ ಗೊತ್ತಾಗುತ್ತಿತ್ತು.

ಒಬ್ಬ ಮಾನ್ಯ ಸದಸ್ಯರು : ಜಾಲಪ್ಪನವರು ಸೋತರು ಅದಕೋಸ್ಕರ ಹೇಳುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಸ್ವಾಮಿ, ನೀವು ಎಷ್ಟು ಕಡೆ ಓಡಾಡಿದಿರಿ, ಎಷ್ಟು ಕಡೆ ಭಾಷಣ ಮಾಡಲು ಸಾಧ್ಯವಾಯಿತು. ಎಂದು ನಾನು ನೋಡಿದ್ದೇನೆ. ನಾನು ನನ್ನ ಕ್ಷೇತ್ರದ ಬಗ್ಗೆ ಹೇಳುತ್ತಿದ್ದೇನೆ. ಬೇರೆ ಕ್ಷೇತ್ರದ ಬಗ್ಗೆ ಹೇಳುವುದಿಲ್ಲ. ಬಹಳಷ್ಟು ಎಂ.ಎಲ್.ಎ.ಗಳಿಗೆ ಜನರು ಭಾಷಣ ಮಾಡಲು ಬಿಡಲಿಲ್ಲ. ಅಭ್ಯರ್ಥಿಗಳು ಭಾಷಣ ಮಾಡಲು ಆಗುತ್ತಿರಲಿಲ್ಲ. 26ನೇ ತಾರೀಖಿನವರೆಗೂ ಏನೂ ತಾಪತ್ರಯ ಇರಲಿಲ್ಲ, ಆದರೆ ನಮ್ಮ ದುರಾದೃಷ್ಟವೇನೋ ಆ ಪುಣ್ಯಾತ್ಮ ದುರಾದೃಷ್ಟಶಾಲಿ ರಾಜೀವ್‌ಗಾಂಧಿಯವರು ಸತ್ತು ನಿಮ್ಮನ್ನು ಉಳಿಸಿದರು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ನಿಮ್ಮ ಪಕ್ಷದಲ್ಲಿ ಯಾರು ಸತ್ತರೆ ಓಟು ಹಾಕುತ್ತಾರೆ?

ಶ್ರೀ ಆರ್. ಎಲ್. ಜಾಲಪ್ಪ : 1984 ರಲ್ಲಿ ಇಂದಿರಾಗಾಂಧಿಯವರು ಸತ್ತು ನಿಮ್ಮನ್ನು ಉಳಿಸಿದರು. ಈಗ ನಂತರ ಯಾರೂ ಸಾಯಲಿಲ್ಲ, ನಿಮ್ಮ ಪಕ್ಷ ಸೋತಿತು. ಈಗ 1991 ರಲ್ಲಿ ರಾಜೀವ್‌ಗಾಂಧಿಯವರು ಸತ್ತರು. ದುರದೃಷ್ಟಶಾಲಿ ಎಂದು ಅವರನ್ನು ಕರೆಯುತ್ತೇನೆ. ಅವರು ಸತ್ತು ನಿಮ್ಮನ್ನು ಉಳಿಸಿದರು. ನೀವು ಚುನಾವಣೆಯಲ್ಲಿ

ಓಟನ್ನು ತೆಗೆದುಕೊಂಡಿದ್ದಲ್ಲ, ನೀವು ಜನಗಳ ಮೌಢ್ಯವನ್ನು ಉಪಯೋಗಿಸಿಕೊಂಡಿರಿ. ಅವರ ಕ್ಯಾಸೆಟ್ಸ್‌ನ್ನು ತೆಗೆದುಕೊಂಡು ಬಂದು ಹಳ್ಳಿಹಳ್ಳಿಗೂ ತೋರಿಸಿದಿರಿ. ಎಷ್ಟೋ ಜನ ಅವರ ತಂದೆ ತಾಯಿಯರ ತಿಥಿಯನ್ನು ಮಾಡಿಲ್ಲ, ಆದರೆ ರಾಜೀವ್ ಗಾಂಧಿಯವರ ತಿಥಿಯನ್ನು ಹಳ್ಳಿಹಳ್ಳಿಯಲ್ಲಿ ಮಾಡಿದರು. ಹೀಗೆ ಮಾಡಿ ಓಟನ್ನು ತೆಗೆದು ಕೊಂಡರೆ ವಿನಹಃ ಬೇರೆಯಲ್ಲ ಅದರ ಜೊತೆಗೆ ನಂಜುಂಡಸ್ವಾಮಿಯವರು ಹೇಳಿದ್ದು ಸೇರಿದೆ. ನಿಮಗೆ ಬಂದಿರುವುದು ನ್ಯಾಯವಾದ ಓಟಲ್ಲ ಅದರಿಂದ ತಲೆ ಕೆಡೆಸಿಕೊಳ್ಳಬೇಕಾದ ಅವಶ್ಯಕತೆಯಿಲ್ಲ, ದಯವಿಟ್ಟು, ಆ ನಿಷಾದಲ್ಲಿ ಇರಬೇಡಿ, ಭೂಮಿಗೆ ಬನ್ನಿ ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಮೊನ್ನೆ ತಿಥಿ ಆಯಿತು ಅಂದಿರಲ್ಲಾ, 1989ರಲ್ಲಿ ಯಾರ ತಿಥಿ ಮಾಡಿ ಇಲ್ಲಿ ಬಂದದ್ದು. 1989ರಲ್ಲಿ ಚುನಾವಣೆ ಆಯಿತು. ನಾವು ಇಲ್ಲಿ ಬರಬೇಕಾದರೆ ಯಾರದಾದರೂ ತಿಥಿ ಆಗಿರಬೇಕಲ್ಲ. ಆ ದಿವಸ ಯಾರ ತಿಥಿ ಆಯಿತು.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : 1989ರಲ್ಲಿ ನಮ್ಮ ಪಕ್ಷ ಒಡೆದು ನಮ್ಮ ಒಗ್ಗಟ್ಟಿನ ತಿಥಿ ಆದಮೇಲೆ ನೀವು ಗೆದ್ದು ಬಂದಿರಿ. ಇಲ್ಲದಿದ್ದರೆ ನೀವು ಗೆದ್ದು ಬರುವುದಕ್ಕೆ ಆಗುತ್ತಾ ಇರಲಿಲ್ಲ. ನಮ್ಮ ಎರಡು ಪಕ್ಷಗಳು ಜನತಾ ದಳ ಮತ್ತು ಪಾರ್ಟಿ ಎಂದು ಒಡೆದು ಹೋಯಿತು. ಇಲ್ಲದಿದ್ದರೆ ನಾವು ಗೆಲ್ಲುತ್ತಿದ್ದೇವು.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ಏನೂ ಬಂಡವಾಳವಿಲ್ಲ. ಆದ್ದರಿಂದ ಏನಾದರೂ ಸಬ್ ಸ್ಟ್ಯಾನ್ಸ್ ಇದ್ದರೆ ಮಾತನಾಡಿ. ಸಬ್ ಜೆಕ್ಟ್ ಇದ್ದರೆ ಧೈರ್ಯವಾಗಿ ಪ್ರಾಮಾಣಿಕವಾಗಿ ಮಾತನಾಡಿ ಇಲ್ಲದಿದ್ದರೆ ಸುಮ್ಮನೆ ಇಂಥಾದ್ದೆಲ್ಲ ಸಬ್ಜೆಕ್ಟ್ ತೆಗೆದುಕೊಂಡು ಮಾತನಾಡಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯಲ್ಲಿ ಯಾರ ಯಾರ ತಿಥಿ ಬಗ್ಗೆ ಮಾತನಾಡತಕ್ಕಂಥ ಸಂದರ್ಭವೇನೂ ಇಲ್ಲ, ಅದು ಸರಿಯಲ್ಲ ಈ ಸದನದಲ್ಲಿ ನಿಮ್ಮ ತಿಥಿ ಎಷ್ಟು ಅವರ ತಿಥಿ ಎಷ್ಟು ಎಂದು ತಿಥಿಗಳ ಬಗ್ಗೆ ಮಾತನಾಡುವುದು ಸರಿಯಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ವಾಟಾಳ್ ನಾಗರಾಜ್‌ರವರೆ ತಿಥಿ ಬಗ್ಗೆ ಎತ್ತಿದವರು ಯಾರು ತಿಥಿಯಿಂದ ಬಂದವರು ಎಂದು ಅವರೇ ಹೇಳಿದ್ದು.

ಶ್ರೀ ಆರ್. ಎಲ್. ಜಾಲಪ್ಪ : ನಾನು ಈಗಲೂ ಹೇಳುತ್ತೇನೆ. ನೀವು ಗೆದ್ದು ಬಂದದ್ದೇ ತಿಥಿಯಿಂದ.

ಶ್ರೀ ವಾಟಾಳ್ ನಾಗರಾಜ್ : ನಾವು ಬೆಳಿಗ್ಗೆ ಬಂದು ಸೇರುತ್ತಿದ್ದೇವೆ. ಯಾರ ಯಾರ ತಿಥಿಯ ಬಗ್ಗೆ ಮಾತನಾಡುವುದು ಸರಿಯಲ್ಲವೆಂದು ನನ್ನ ಭಾವನೆ.

ಶ್ರೀ ಟಿ. ಎಂ. ಮಂಜುನಾಥ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯರಾದಂಥ ಜಾಲಪ್ಪನವರು ಒಳ್ಳೆಯ ಮಂತ್ರಿಗಳಾಗಿದ್ದಂಥವರು, ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿರತಕ್ಕಂತಹವರು ಸ್ವಲ್ಪ ಸಮಾಧಾನವಾಗಿರಬೇಕು. ಮತ್ತು ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಂಥ ದೊಡ್ಡ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಇವತ್ತು ನಮ್ಮ ಸರ್ಕಾರದ ಮೇಲಿನ ಅವಿಶ್ವಾಸನಿರ್ಣಯದ ಮಂಡನೆ ಬಗ್ಗೆ ಮಾತಾನಾಡುತ್ತಾ ಇದ್ದಾರೆ. ಅವರಿಗೂ ಗೊತ್ತಿದೆ

ಮತ್ತು ಸದನದ ಎಲ್ಲರಿಗೂ ಗೊತ್ತಿದೆ. ಈ ಸದನದಲ್ಲಿ ಯಾವ ವಿಚಾರವನ್ನು, ಯಾವ ಹಂತದಲ್ಲಿ ಯಾವ ಮಟ್ಟದಲ್ಲಿ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ತಮಗೆ ನಾನು ಹೇಳತಕ್ಕಂಥದ್ದು ಏನೂ ಇಲ್ಲ. ಆದರೂ ಸಹಿತ ಮೇಲ್ಗಡೆ ಪತ್ರಿಕೆಯವರು ಇದ್ದಾರೆ. ಎಲ್ಲರೂ ಇದ್ದಾರೆ. ನಾವು ಪ್ರಸ್ತಾವನೆ ಮಾಡಬೇಕಾದರೆ ಯಾವ ವಿಚಾರಗಳ ಬಗ್ಗೆ ಹೋಗಬೇಕು. ಅದರಲ್ಲೂ ಇವತ್ತು ಗುರುವಾರ ಬೆಳಿಗ್ಗೆ ಬಂದಿದ್ದೇವೆ. ಎನ್ನತಕ್ಕಂಥ ವಿಚಾರವನ್ನು ನಾನು ದಯವಿಟ್ಟು ಕೈಮುಗಿದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ವಿಷಯದ ಬಗ್ಗೆ ಮಾತನಾಡಬೇಕೇವಿನಃ ಅನಾವಶ್ಯಕವಾಗಿ ಗಂಟೆಗಟ್ಟಲೆ ಇಲ್ಲದೇ ಇರತಕ್ಕ ವಿಷಯವನ್ನು ಮಾತನಾಡುವುದು ನಮಗೂ ನಿಮಗೂ ಗೌರವವಲ್ಲ. ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಕಳಿಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಮಗೆ ಹೆಚ್ಚಿಗೆ ಹೇಳತಕ್ಕಂಥ ಶಕ್ತಿ ನಮಗೆ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂಜುನಾಥ್‌ರವರು ನಮಗೆ ಬುದ್ಧಿವಾದ ಹೇಳಿದ್ದಾರೆ, ಅವರಿಗೆ ನಾನು ವಂದನೆಗಳನ್ನು ಅರ್ಪಿಸುತ್ತೇನೆ. ಅದನ್ನು ಮೊದಲು ನಾಯಕ್‌ರವರಿಗೆ ಹೇಳಿ ನಾವು ಸರಿಯಾಗಿಯೇ ಹೋಗುತ್ತಿದ್ದೆವು. ನಿಮ್ಮ ಪಕ್ಷದವರಿಗೆ ನಾವು ಹೇಳುವುದನ್ನು ಕೇಳುವುದಕ್ಕೆ ಸಹನೆ ಇಲ್ಲ. ಈ ಎರಡು-ಮೂರು ವರ್ಷಗಳಿಂದ ನಿಮ್ಮನ್ನು ಬೀದಿಗಿಟ್ಟು ಹರಾಜು ಹಾಕಿದ್ದಾರೆಂದು ಹೊಟ್ಟೆಯುರಿ ಬಂದು ಇಲ್ಲಸಲ್ಲದ ಕಿತಾಪತಿ ತೆಗೆದವರು ನಿಮ್ಮ ನಾಯಕರು ಅವರಿಗೆ ಹೇಳಿ ನೀವು ನನಗೆ ಏಕೆ ಹೇಳುತ್ತೀರಿ? ನನಗೆ ಗೊತ್ತಿದೆ. ನನ್ನ ಲಿಮಿಟೇಷನ್ಸ್ ಏನು ನಾನು ಏನು ಮಾತನಾಡಬೇಕೆಂದು ನನಗೂ ಗೊತ್ತಿದೆ. ತಮ್ಮಂತವರ ಜೊತೆ ಓಡಾಡಿ ನನಗೂ ಸ್ವಲ್ಪ ಅನುಭವವಿದೆ. ನನಗೆ ಬುದ್ದಿವಾದ ಹೇಳುತ್ತಿದ್ದೀರಿ. ನನಗೆ ಬುದ್ಧಿವಾದ ಬೇಡ. ಅವರಿಗೆ ಹೇಳಿ ಮಾನ್ಯ ಅಧ್ಯಕ್ಷರೇ, ಕೆಲವು ಯೋಜನೆಗಳನ್ನು ಸರ್ಕಾರದವರು ಹಾಕಿಕೊಂಡರು. ಅದರಲ್ಲಿ ಅಕ್ಷಯ ಯೋಜನೆ ಒಂದು ಈ ಅಕ್ಷಯ ಯೋಜನೆ ಪ್ರಾರಂಭವಾಯಿತೇನು? ಒಂದನೆಯ ತರಗತಿಯಿಂದ ಏಳನೇಯ ತರಗತಿಯವರಿಗೆ ಊಟ ಕೊಡುತ್ತೇವೆಂದು ಹೇಳಿ, ಅದರ ಹೆಸರಿನಲ್ಲಿ ಅವರಿಗೆ ಕೊಡತಕ್ಕಂಥ ಬಟ್ಟೆ, ಪುಸ್ತಕ ತಪ್ಪಿಸಿದಿರಿ. ಆಮೇಲೆ ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಮೊಟ್ಟೆ ಕೊಡುತ್ತೇವೆಂದು ಹೇಳಿದರು. ಕೆಲವರಿಗೆ ಮಾತ್ರ ಬಟ್ಟೆ ಕೊಟ್ಟಿದ್ದಾರೆ, ಎಲ್ಲರಿಗೂ ಕೊಟ್ಟಿಲ್ಲ, ಈ ಅಕ್ಷಯ ಯೋಜನೆಯಲ್ಲಿ ಮೊಟ್ಟೆ ಕೊಡುತ್ತೇವೆಂದು ಹೇಳಿದಾಗ, ನಾವು ಬಂಗಾರಪ್ಪನವರು ಪರವಾಗಿಲ್ಲ ಮೊಟ್ಟೆ ಕೊಡುತ್ತೇವೆಂದು ಹೇಳಿದ್ದಾರೆ. ಸ್ವಲ್ಪ ಸ್ವಲ್ಪ ತಿಳಿದುಕೊಂಡಿದ್ದಾರೆಂದು ಅಂದುಕೊಂಡಿದ್ದೆವು. ಆಮೇಲೆ ಅವರು ನಾವು ಮೊಟ್ಟೆ ಕೊಡುತ್ತೇವೆಂದು ಹೇಳಿಲಿಲ್ಲವೆಂದು ಹೇಳಿದರು. ಈಗ ಕಡೆಗೆ ಮಕ್ಕಳಿಗೆ ಸಿಕ್ಕಿದ್ದು ಮೊಟ್ಟೆಯಾಕಾರದ ಗುರುತು ಸೊನ್ನೆ ಶೂನ್ಯ ಇನ್ನೇನೂ ಆಗಲಿಲ್ಲ. ಏಕೆ ಹಾಗೆ ಹೇಳುತ್ತಾರೆ. ಐದು ತಿಂಗಳಿಂದ ಮಾಡುವುದಕ್ಕೆ ಏನೂ ಇತ್ತು ಹೀಗಾದರೆ ಜನ ನಿಮ್ಮ ಮೇಲೆ ಯಾವ ರೀತಿ ವಿಶ್ವಾಸ ಇಡುತ್ತಾರೆ? ನಾವು ಯಾವ ರೀತಿ ನಿಮ್ಮಲ್ಲಿ ವಿಶ್ವಾಸ ಇಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮೊಟ್ಟೆಗಳು ದಾಸ್ತಾನು ಇರಲಿಲ್ಲ ಎಂದು ನನಗನಿಸುತ್ತದೆ. ಕೋಳಿಗಳನ್ನೆಲ್ಲಾ ಮಂತ್ರಿಗಳೇ ತಿಂದುಕೊಂಡಿರಬೇಕು. ಮೊಟ್ಟೆಗಳು ಸಿಕ್ಕದೇ ಇರುವುದರಿಂದ, ಅವರು ಕೊಟ್ಟಿಲ್ಲ ಎಂದು ಕಾಣಿಸುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಇನ್ನು ಶುಶ್ರೂಷೆ ಯೋಜನೆ ಹಾಕಿದಿರಿ. ಈ ಯೋಜನೆಗೆ ಒಂದು ಕೋಟಿ ರೂಪಾಯಿ ಇಟ್ಟಿದ್ದೀರಿ. ಎಲ್ಲಾ ನಾಗರೀಕರನ್ನು ಅಂದರೆ ನಾಲ್ಕೂವರೆ ಕೋಟಿ ನಾಗರಿಕರನ್ನು ತಪಾಸಣೆ ಮಾಡಿ, ಅವರಿಗೆ ಔಷಧಿ ಕೊಡುವುದು, ಅವರಿಗೆ ಯಾವ ಯಾವ ಕಾಯಿಲೆ ಇದೆ ಎಂದು ನೋಡಿ ಅವರ ಬ್ಲಡ್ ಗ್ರಾಪ್ ಎಲ್ಲಾ ಹಾಕುವುದು. ಎಂದು ಮಾಡಿದ್ದೀರಿ, ಇಲ್ಲಿಯವರೆಗೆ ಆಗಿರುವುದಕ್ಕೆ ತಾವು

ಏನು ಕಾರ್ಡ್ ಕೊಟ್ಟಿದ್ದೀರಿ. ಆ ಕಾರ್ಡ್‌ನ್ನು ನಾನು ನೋಡಿದ್ದೇನೆ. ಸಂತೋಷ ಆದರೆ ಈ ಕ್ಯಾಂಪ್‌ಗಳಲ್ಲಿ ಏನಾಗುತ್ತಿದೆಯೆಂದರೆ ಇವರು ಹೋಗುವುದು ಬರೀ ಭಾಷಣ ಮಾಡುವುದು. ಒಂದು ಇಪ್ಪತ್ತು ಜನರಿಗೆ ನೋಡುವುದು. ಬರುವುದು. ಐದುರೂಪಾಯಿ ಖರ್ಚಾಗುತ್ತಾ ಇಲ್ಲ ಐದು ಕಾಸಿನ ಪ್ರಯೋಜನ ಇಲ್ಲ. ಇದಕ್ಕೆ ಒಂಜು ಕೋಟಿ ರೂಪಾಯಿ ಇಟ್ಟಿದ್ದೀರಿ, ಇದು ಸಾಕಾಗುತ್ತದೆಯೇ? ಇಷ್ಟು ಮಾಡಲಿಕ್ಕೆ ಒಂದು ವರ್ಷಕ್ಕೆ ಸುಮಾರು 15 ಕೋಟಿ ರೂಪಾಯಿ ಬೇಕಾಗುತ್ತದೆ. ಒಂದು ಕ್ಯಾಂಪ್‌ಗೆ ಕಡೇಪಕ್ಷ 20 ಸಾವಿರ 25 ಸಾವಿರ ರೂಪಾಯಿ ಬೇಕು. ನಮ್ಮ ಮೆಡಿಕಲ್ ಕಾಲೇಜಿನಿಂದ ನಾನು ಮಾಡಿಸುತ್ತಿದ್ದೇವೆ. ನಾನು ಮೊನ್ನೆ ಹೊಸಹಳ್ಳಿಯಲ್ಲಿ ಒಂದು ಕ್ಯಾಂಪ್ ಮಾಡಿಸಿದೆ. ಅಲ್ಲಿ 27 ಸಾವಿರ ರೂಪಾಯಿಗಳ ಔಷಧಿ ಕೊಟ್ಟಿದ್ದೇವೆ. ಅದು ಏನೇನೂ ಸಾಲದು ನೀವು ತೆಗೆದುಕೊಂಡು ಹೋಗಿಬಿಟ್ಟು ಅವರಿಗೆ ಬರೀ ಮುಖ ತೋರಿಸಿ ಒಂದು ಕಾರ್ಡ್ ಕೊಟ್ಟು ಬಂದರೆ ಇದರಿಂದ ಏನು ಪ್ರಯೋಜನ ಆಗುತ್ತದೆ. ನಾಲ್ಕು ಆಣೆ ಆ ಪ್ರಿಂಟಿಂಗ್ ಜಾರ್ಜಗೆ ಆಗುವುದಿಲ್ಲ. 4 ಆಣೆಯಲ್ಲಿ ಪ್ರತಿಯೊಬ್ಬ ಮನುಷ್ಯರನ್ನು ತಪಾಸಣೆ ಮಾಡುತ್ತೇವೆಂದು ಹೇಳುದ್ದೀರಿ. 4 ಆಣೆ ಆ ಕಾರ್ಡ್‌ಗೆ ಆಗುತ್ತದೆ ಅಷ್ಟೇ ಆದ್ದರಿಂದ. ಇಂತಹ ಯೋಜನೆಗಳನ್ನೆಲ್ಲಾ ಬಿಡಿ. ಇರತಕ್ಕ ಆಸ್ಪತ್ರೆಗಳಲ್ಲಿ ಔಷಧಿ ಕೊಡುವ ಏರ್ಪಾಡು ಮಾಡಿ. ತಾವು ಇರುವುದು ಕೆಲಸ ದಿವಸ ಎಷ್ಟು ದಿವಸ ಇರುತ್ತೀರೋ ನನಗೆ ಗೊತ್ತಿಲ್ಲ. ಈಗ ತಾವು ಏನು ವಿಶ್ವಾಸ ಕಳೆದುಕೊಂಡಿದ್ದೀರಿ,ಆ ವಿಶ್ವಾಸವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡಿ ಎಂದು ತಮಗೆ ಹೇಳುತ್ತಿದ್ದೇನೆ. ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ, ನಿಮ್ಮದೊಂದು ಕ್ಲಂಪ್ ಯೋಜನೆ ಇತ್ತು. ಏನಾಯಿತು.? ವ್ಯವಸಾಯ ಮಂತ್ರಿಗಳು ಯಾರೂ ಇಲ್ಲ. ಕ್ಲಂಪ್ ಯೋಜನೆ ಎಂದು ಮಾಡಿದಿರಿ. 82 ಲಕ್ಷ ಟನ್ ನೀವು ಎಕ್ಸ್‌ಪೆಕ್ಟ್ ಮಾಡಿದ್ದಿರಿ. ಆದರೆ ಈ ವರ್ಷ ಅಷ್ಟು ಬೆಳೆಯಲಿಕ್ಕೆ ಸಾಧ್ಯವಿಲ್ಲ. ಮಳೆಯಾಗಿದೆ, ಸಮಯಕ್ಕೆ ಸರಿಯಾಗಿ ಗೊಬ್ಬರ ಇಲ್ಲ. ಕೆಲವು ಕಡೆ ಜಾಸ್ತಿ ಮಳೆಯಾಗಿ ಬೆಳೆಹೋಯಿತು. ಇನ್ನು ಕೆಲವು ಕಡೆ ಅನಾವೃಷ್ಟಿಯಿಂದ ಬೆಳೆಹೋಯಿತು. ತಾವು ಇಲ್ಲಿ ಏನು ಹೇಳಿದ್ದೀರಿ. ಎಂದರೆ " To check degradation and maintain the ecological balace, we are taking up the Comprehensive Land Use management programme (CLUMP) with the assistance from the overseas Economic Co-operatin Fund of Japan".

ಒಳ್ಳೆಯ ದೊಡ್ಡ ದೊಡ್ಡ ಅಕ್ಷರಗಳನ್ನು ಉಪಯೋಗಿಸಿದಿರಿ. ಪದಗಳನ್ನು ಉಪಯೋಗಿಸಿದಿರಿ. ಈ ಕ್ಲಮ್ಪ್‌ಗೆ ಮೂರು ಕಾಸಿನ ಕೆಲಸ ಇಲ್ಲ. ನಮ್ಮ ಕರ್ನಾಟಕದಲ್ಲಿ ನೀವೇನು 82 ಲಕ್ಷಟನ್ ಎಕ್ಸ್‌ಪೆಕ್ಟ್ ಮಾಡಿದ್ದೀರಿ. ಅದರಲ್ಲಿ ಶೇಕಡ 60ರಷ್ಟು ಕೂಡ ಈ ಸಾರಿ ಉತ್ಪಾದನೆಯಾಗುವುದಿಲ್ಲ, ಆದ್ದರಿಂದ, ಇದರ ಬಗ್ಗೆ ಎಚ್ಚರಿಕೆ ವಹಿಸಿ, ಮುಂದಿನ ಬೆಳೆ ರಬಿಕ್ರಾಪ್ ಹೆಚ್ಚಿಗೆ ಬರುವಂಥ ವ್ಯವಸ್ಥೆಯನ್ನು ನೀವು ಮಾಡಿಕೊಳ್ಳದಿದ್ದರೆ ಈ ರಾಜ್ಯವನ್ನು ತಾವು ಕ್ಷಾಮದ ದವಡೆಗೆ ತಳ್ಳುತ್ತಿದ್ದೀರಿ ಎಂದು ನಾನು ಎಚ್ಚರಿಕೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಆಶ್ರಯ ಯೋಜನೆ ಇದರಷ್ಟು ನಾಚಿಕೆಗೇಡು ಇನ್ನಾವುದೂ ಇಲ್ಲ. ಯಾರು ಸ್ವಾಮಿ ಇವನ್ನೆಲ್ಲ ನಿಮಗೆ ಹೇಳಿಕೊಟ್ಟಿದ್ದು. ಈ ಆಶ್ರಯ ಯೋಜನೆಯಲ್ಲಿ ಒಂದು ಲಕ್ಷ ಸೈಟುಗಳನ್ನು ಡಿಸ್ಟ್ರಿಬ್ಯೂಷನ್ ಮಾಡುತ್ತೇವೆಂದು ಹೇಳಿದ್ದೀರಿ. ಸ್ವಾಮಿ,ಮೊದಲು ಇದು ಜಿಲ್ಲಾ ಪರಿಷತ್‌ನವರಿಗೆ ಇತ್ತು. ಅವರು ಹಾಗೋ, ಹೀಗೋ ಮಾಡುತ್ತಿದ್ದರು. ಅದನ್ನು ಮಾನ್ಯ ಬಸವಲಿಂಗಪ್ಪನವರು ಕಿತ್ತು ಹಾಕಿದರು ಇವೊತ್ತು ಅದಕ್ಕೆ ಒಂದು ಕಮಿಟಿ ಮಾಡುತ್ತೇವೆ, ಆ ಕಮಿಟಿಯವರು ಕೊಡಲಿ ಎಂದು ರೆವಿನ್ಯೂ ಡಿಪಾರ್ಟ್‌ಮೆಂಟಿನವರ ಕೈಗೆ ಆ ಕೆಲಸವನ್ನು ವಹಿಸಿದ್ದಾರೆ. ನಾನು ಈ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ

ಆಗಿದ್ದೆ, ಈ ಸರ್ಕಾರ ಇದನ್ನು ತೆಗೆದುಕೊಂಡ ಮೇಲೆ ಎಷ್ಟು ಸೈಟುಗಳನ್ನು ಕೊಟ್ಟಿದ್ದಾರೆ. ಎಂದು ನಾನು ಕೇಳಿದರೆ ಒಂದೇ ಒಂದು ಸೈಟು ಕೊಡಲಿಕ್ಕೆ ಆಗಿಲ್ಲ. ಒಂದು ಸೈಟು ಕೊಟ್ಟಿಲ್ಲವೆಂದು ಹೇಳಿದರು ಇವರು ಒಂದು ಲಕ್ಷ ಸೈಟು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಡಾ. ಅಂಬೇಡ್ಕರ ಅವರ ಶತಮಾನೋತ್ಸವದ ಸಂಬಂಧವಾಗಿ ಒಂದು ಲಕ್ಷ ಮನೆಯಗಳನ್ನು ನಾವು ಈ ಸಾರಿ ಕಟ್ಟಿಸುತ್ತೇವೆಂದು ಒಂದು ಕಡೆ ಹೇಳಿದರು. ಆ ಮೇಲೆ ಇನ್ನೊಂದು ಕಡೆ ಹೋಗಿ ಎರಡು ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆ ಎಂದು ಹೇಳಿದರು. ಸ್ವಾಮಿ ಒಂದು ಮನೆ ಆಗಿದೆಯೇ? ಇದು ಡಾ. ಅಂಬೇಡ್ಕರ್ ರವರ ಹೆಸರಿಗೆ ಅಪಮಾನ. ಅದ್ದರಿಂದ ದಲಿತರು ನಿಮ್ಮಲ್ಲಿ ವಿಶ್ವಾಸ ಕಳೆದುಕೊಂಡಿದ್ದಾರೆ. ಇವೊತ್ತು ದಲಿತರು ಬೀದಿಗೆ ಇಳಿಯುತ್ತಿದ್ದಾರೆ. ನಿನ್ನೆ ಬೀದರ್ ನಲ್ಲಿ ಏನಾಗಿದೆ ಎಂದು ಇವೊತ್ತು ಪೇಪರ್‌ನಲ್ಲಿ ನೋಡಿದಿರಾ. ಈ ರೀತಿ ಆದರೆ ಈ ರಾಜ್ಯದಲ್ಲಿ ಶಾಂತಿ, ಸಮಾಧನವೂ ಇರುವುದಿಲ್ಲ, ನಿಮ್ಮ ಸರ್ಕಾರ ಇದ್ದರೂ ಒಂದೇ, ಸತ್ತರೂ ಒಂದೇ ಇದರಿಂದ ಯಾರಿಗೂ ಏನೂ ಪ್ರಯೋಜನವಿಲ್ಲ.

ಆದ್ದರಿಂದ ದಯಮಾಡಿ ನೀವು ಈ ವಿಚಾರದಲ್ಲಿ ಎಚ್ಚರವಾಗುವುದಾದರೆ ಆಗಿ, ಇಲ್ಲದಿದ್ದರೆ ನಿಮ್ಮ ಹಣೆಯಬರಹ ಅನುಭವಿಸಿ. ನಾವು ಏನು ಮಾಡುವುದಕ್ಕಾಗುತ್ತದೆ? ನಾವು ತಮಗೆ ಸಲಹೆ ಕೊಡಬಹುದು. ಆದರೆ ಅದನ್ನು ಆಚರಣೆಗೆ ತರಬೇಕಾದವರು ತಾವು. ಇದರ ಬಗ್ಗೆ ತಾವು ಯೋಚನೆ ಮಾಡುತ್ತೀರೆಂದು ನಾನು ಅಂದುಕೊಂಡಿದ್ದೇನೆ.

ಇನ್ನು ಕೊ-ಆಪರೇಷನ್ ಬಗ್ಗೆ ಹೇಳುವುದಾದರೆ, ಬಹುಶಃ ಈ ಇಲಾಖೆ ಹದಗೆಟ್ಟಿರುವಷ್ಟು ಇನ್ನು ಯಾವ ಇಲಾಖೆಗಳೂ ಹದಗೆಟ್ಟಿಲ್ಲ. ಈ ಇಲಾಖೆ ಮತ್ತು ಇದರ ಜೊತೆಗೆ ಜಿಲ್ಲಾ ಪರಿಷತ್ತುಗಳನ್ನೂ ನೀವು ಬಂದು ಹಾಳುಮಾಡಿದಿರಿ.

ಶ್ರೀ ಹೆಚ್. ಏಕಾಂತಯ್ಯ: ಕೆ.ಹೆಚ್. ಪಾಟೀಲರು ಬಂದ ತಕ್ಷಣ ತಾವು ಹೇಳಿದಿರಲ್ಲಾ ಏಕೆ?

ಶ್ರೀ ಆರ್.ಎಲ್. ಜಾಲಪ್ಪ: ಅವರು ಇದ್ದಾಗ ಏನೋ ಸೇಫ್ ಆಗಿತ್ತು ಎಂದು ಅಂದುಕೊಂಡಿದೇವೆ. ಯಾವ ವ್ಯಕ್ತಿ ತಮ್ಮ ಸಹಕಾರಿ ಜೀವನದಲ್ಲಿ ಈ ನಾಮಕರಣ ಪದ್ಧತಿಗಳನ್ನು ವಿರೋಧ ಮಾಡಿಕೊಂಡು ಬಂದಿದ್ದರೋ ಆವ್ಯಕ್ತಿಯ ಕೈಯಲ್ಲೇ ಈ ಪ್ರೈಮರಿ ಸೊಸೈಟಿಗಳಿಗೆ ನೀವು ನಾಮಕರಣ ಮಾಡಿಸಿದಿರಿ. ಇದಕ್ಕಿಂತ ಹೇಯವಾದ ಕೆಲಸ ಇನ್ನೊಂದು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಕೆ.ಎಚ್.ಪಾಟೀಲರು ಈ ಕಡೆ ಗಮನಕೊಡಬೇಕು. ಯಾವ ವ್ಯಕ್ತಿ ತಮ್ಮ ಸಹಕಾರಿ ಜೀವನದಲ್ಲಿ ನಾಮಕರಣ ಪದ್ಧತಿಯನ್ನು ವಿರೋಧ ಮಾಡಿಕೊಂಡು ಬಂದಿದ್ದರೋ ಅವರ ಕೈಯಲ್ಲೇ ಪ್ರಾಥಮಿಕ ಸಹಕಾರ ಸಂಘಗಳಿಗೆ ನಾಮಿನೇಶನ್ ಹಾಕಿಸಿ ಅವರ ಮರ್ಯಾದೆಯನ್ನು ತೆಗೆದಿರಿ ಎಂದು ನಾನು ಹೇಳುತ್ತಿದ್ದೆ. ಏತಕ್ಕೇದನ್ನು ಮಾಡಿದ್ದು ಗೊತ್ತೆ? ಈ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ನಿಮ್ಮ ಪಕ್ಷದವರು ಗೆಲ್ಲುವುದಕ್ಕೆ ಆಗಲಿಲ್ಲ; ನಿಮ್ಮ ಪಕ್ಷದವರು ಬಹಳಷ್ಟು ಕಡೆಗಳಲ್ಲಿ ಸೋತರು. ಆಗ ಏನಾದರೂ ಮಾಡಿ ಹಿಂದಿನ ಬಾಗಿಲಿನಿಂದ ಮತ್ತೆ ಅಧಿಕಾರಕ್ಕೆ ಬರಬೇಕೆಂದು ಪ್ರಾಥಮಿಕ ಸಹಕಾರಿ ಸಂಘಗಳಿಗೆ ನೀವು ನಾಮಿನೇಶನ್ ಹಾಕಿಸಿದಿರಿ. ಬಹುಶಃ ನನಗೆ ತಿಳಿದಿರುವಂತೆ, ನಮ್ಮ ಭಾರತದಲ್ಲಿರತಕ್ಕ ಯಾವ ಪ್ರಾಥಮಿಕ ಸಹಕಾರಿ ಸಂಘಗಳಿಗೂ ನಾಮಿನೇಶನ್ ಹಾಕಿಲ್ಲ. ಅದರಿಂದಾಗಿ ಟಿ.ಎ.ಪಿ.ಎಂ.ಸಿ.ಗಳು ನಿಮ್ಮ ಕೈಗೆ ಬರಬೇಕು, ಜಿಲ್ಲಾ ಬ್ಯಾಂಕುಗಳು ನಿಮ್ಮ ಕೈಗೆ ಬರಬೇಕು ಎಂಬುದು ಮುಖ್ಯ ಉದ್ದೇಶವಾಗಿತ್ತು. ಅದರ ಬದಲು ನೀವು ಅವುಗಳನ್ನೆಲ್ಲಾ ಸೂಪರ್ ಸೀಡ್ ಮಾಡಿ ಅಲ್ಲಿಗೆ ಒಬ್ಬ ಅಡ್ಮಿನಿಸ್ಟ್ರೇಟರ್‌ನ್ನು ಹಾಕಿ ನಿಮ್ಮ ಕೈಗೆತೆಗೆದುಕೊಳ್ಳಬಹುದಲ್ಲಾ. ಆದಕ್ಕೆ ಒಂದು ಕಾನೂನು ಮಾಡಿ. ನೀವು ಏತಕ್ಕೆ ಈ ರೀತಿ ಹೊಲಸು ಮಾಡುತ್ತಿದ್ದೀರಿ? ಹಿಂದೆ ನಾನು ಅಧಿಕಾರದಲ್ಲಿದ್ದಾಗ ಇಂಥಾದ್ದು ಮಾಡಲಿಲ್ಲ, ನನ್ನ ಕಾಲದಲ್ಲಿ ಇಡೀ 26 ಸಾವಿರ ಸಹಕಾರಿ ಸಂಘಗಳಲ್ಲಿ...

ಶ್ರೀ ಕರಿಯಣ್ಣ : ಡಿ.ಸಿ.ಸಿ. ಬ್ಯಾಂಕ್.....

ಶ್ರೀ ಆರ್.ಎಲ್. ಜಾಲಪ್ಪ :ಡಿ.ಸಿ.ಸಿ. ಬ್ಯಾಂಕ್‌ಗೆ ಇವತ್ತು ಹಾಕಿ, ನಾಳೆ ಹಾಕಿ. ಅದಕ್ಕೆ ಬೇಡ ಎಂದು ನಾನು ಹೇಳುವುದಿಲ್ಲ.

ಶ್ರೀ ಕರಿಯಣ್ಣ : ಇವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾದರು. ಆಗ ನಾಮಿನೇಷನ್‌ನ್ನು ರಾತ್ರೋ ರಾತ್ರಿ ಮಾಡಿಕೊಂಡು ಇವರು ಅಧ್ಯಕ್ಷರಾದರು. ಇದು ನನಗೂ ಗೊತ್ತಿದೆ. ನೀವು ಅಪೆಕ್ಸ್ ಬ್ಯಾಂಕ್‌ಗೆ ಅಧ್ಯಕ್ಷರಾಗುವುದಕ್ಕೆ ರಾತ್ರೋ ರಾತ್ರಿ ಮಿನಿಸ್ಟರ್‌ರವರಿಂದ ನಾಮಿನೇಷನ್ ಮಾಡಿಸಿಕೊಂಡು ಹೋಗಿ ನಾಮಿನೇಷನ್ ಓಟ್ನಲ್ಲಿ ತಾವು ಅಧ್ಯಕ್ಷರಾದಿರಿ.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಕರಿಯಣ್ಣನವರ ಮಾತಿಗೆ ನಾನು ಬೆಲೆ ಕೊಡಬೇಕಾದುದು ಅನಾವಶ್ಯಕ. ಏಕೆಂದರೆ ಅವರಿಗೆ ಏನೇನೂ ಗೊತ್ತಿಲ್ಲ.

ಶ್ರೀ ಕರಿಯಣ್ಣ : ತಮಗೇ ಎಲ್ಲಾ ಗೊತ್ತಿರತಕ್ಕದ್ದು. ಆ ಕಾನೂನನ್ನು ತಿದ್ದುಪಡಿ ಮಾಡಿ ರೈತರ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿರಿ, ಮತ್ತೆ ನೀವು ರೈತರ ಇಲ್ಲಿ ಮಾತನಾಡುತ್ತಿದ್ದೀರಿ. ರೈತರ ಜಮೀನನ್ನು ಹರಾಜು ಮಾಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕ ಕಾನೂನನ್ನು ಮಾಡಿಕೊಂಡಿರಿ. ಸೆಕ್ಷನ್ 105 ಜಾರಿಮಾಡಿದಿರಿ. 30(A), 30(B) ಅನ್ನು ಬದಲಾವಣೆ ಮಾಡಿ ಯಾವುದೇ ಎನ್‌ಕ್ವೈರಿ ಇಲ್ಲದೆ ಸೂಪರ್ ಸೀಡ್ ಮಾಡುವಂತೆ ಮಾಡಿದಿರಿ. ಇದು ನನಗೆ ಗೊತ್ತಿಲ್ಲವೆಂದು ನೀವು ಹೇಳುತ್ತಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ : ನನ್ನ ಸಹಕಾರಿ ಜೀವನದಲ್ಲಿ ಒಂದು ದಿವಸ ಕೂಡ ನಾಮಿನೇಷನ್ ಮಾಡಿಸಿಕೊಂಡು ಹೋಗಿ ಅಧ್ಯಕ್ಷನಾದವನಲ್ಲ. ನಾನು ಡೈರೆಕ್ಟರ್‌ಗಳಿಂದ ಯುನಾನಿಮಸ್ ಆಗಿ ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಆಗಲಿ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಆಗಲಿ ಆಯ್ಕೆಯಾಗಿ ಬಂದಿದ್ದೇನೆಯೇ ಹೊರತು ಎಲ್ಲೂ ಕೂಡ, ಯಾವಾಗಲೂ ಕೂಡ ನಾಮಿನೇಷನ್ ಮಾಡಿಸಿಕೊಂಡು ಹೋಗಿಲ್ಲ. ಶ್ರೀಮಾನ್ ಗುಂಡೂರಾಯರು ಅಧಿಕಾರವನ್ನು ವಹಿಸಿಕೊಂಡ 15 ದಿವಸದಲ್ಲೇ 7 ಜನರ ನಾಮಿನೇಷನ್ ಹಾಕಿ ನನ್ನನ್ನು ಅಲ್ಲಿಂದ ತೆಗೆದರು. ಆದರೆ ನಾನು ನಾಮಿನೇಷನ್ ಹಾಕಿಸಿಕೊಂಡು ಹೋಗಲಿಲ್ಲ.

ಆಮೇಲೆ ಮಾನ್ಯ ಸದಸ್ಯರು ಸೆಕ್ಷನ್ 105ನ್ನು ಜಾರಿ ಮಾಡಿದಿರಿ, ರೈತರ ಜಮೀನನ್ನು ಹರಾಜು ಮಾಡಿದಿರಿ ಎಂದು ಹೇಳಿದರು. ಸ್ವಾಮಿ, ಲಕ್ಷಗಟ್ಟಲೆ ಸಾಲವನ್ನು ತೆಗೆದುಕೊಂಡು ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡು, ತೆಂಗಿನ ತೋಟ, ದ್ರಾಕ್ಷಿ ತೋಟ ಮುಂತಾದುವನ್ನು ಮಾಡಿಕೊಂಡರು. ಅವರು ತೆಗೆದುಕೊಂಡ ಸಾಲವನ್ನು ವಾಪಸು ಕೊಡದಿದ್ದರೆ ನೀವು ಯಾವ ರೀತಿ ಸಂಸ್ಥೆಗಳನ್ನು ನಡೆಸುತ್ತೀರಿ? ಇವತ್ತು ನಿಮಗೆ ಯಾವುದಾದರೂ ಸಂಸ್ಥೆಯಲ್ಲಿ 5 ರೂಪಾಯಿ ಸಾಲ ಸಿಕ್ಕುತ್ತಿದೆಯೇ? ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಹಾಳಾಗಿ ಹೋಯಿತು, ಎಲ್ಲ ಜಿಲ್ಲಾ ಬ್ಯಾಂಕ್‌ಗಳೂ ಹಾಳಾಗಿ ಹೋದುವು. ಆದರೂ ಇದರ ಬಗ್ಗೆ ನೀವು ಕಣ್ಣು ತೆರೆಯುವುದಕ್ಕೆ ಆಗಿಲ್ಲ. ರೈತರ ಬಗ್ಗೆ ನಿಮಗೆ ಕಾಳಜಿ ಇಲ್ಲ. ಅವರಿಗೆ ಸಾಲ ಸಿಕ್ಕಬೇಕೆಂಬ ಮನಸ್ಸು ನಿಮಗೆ ಇಲ್ಲ. ಆದರೆ ನೀವು ಇಲ್ಲ ಬಂದು ಆರಾಮವಾಗಿ ಕುಳಿತು ಹೋಗಬೇಕೆಂದಿದ್ದೀರಿ, ಸಂತೋಷ, ಅದೇ ರೀತಿ ಮಾಡಿಕೊಂಡು ಹೋಗಿ. ಇದರಿಂದ ನಮಗೇನೂ ತೊಂದರೆ ಇಲ್ಲ. ನೀವು ಏನು ತಪ್ಪು ಮಾಡುತ್ತಿದ್ದೀರಿ......

ಶ್ರೀ ಕರಿಯಣ್ಣ : ಬಹಳ ಸಂತೋಷ. ರೈತರ ಸಾಲ ವಜಾ ಮಾಡಿ ಎಂದು ನೀವು ಚಳುವಳಿಯನ್ನು ಮಾಡದೇ ಇದ್ದಿದ್ದರೆ ಇವತ್ತು ರೈತರು ತಮ್ಮ ಸಾಲವನ್ನು

ಕಟ್ಟುತ್ತಿದ್ದರು, ಮತ್ತೆ ಸಾಲವನ್ನು ತೆಗೆದುಕೊಳ್ಳುತ್ತಿದ್ದರು. ತಾವು ಈ ರೀತಿ ಬಿಗಿಯಾದ ಕ್ರಮ ತೆಗೆದುಕೊಂಡಿದ್ದಿದ್ದರೆ ಈಗ ರೈತರ ಸಾಲವನ್ನು ಮಾಫಿ ಮಾಡಿ, ವಜಾ ಮಾಡಿ ಚಳುವಳಿ ಮಾಡಿ ಎಂದು ಮಾನ್ಯ ಯಡಿಯೂರಪ್ಪನವರು ಮಾಡತಕ್ಕ ಭಾಷಣಕ್ಕೆ ಏಕೆ ಸಹಕಾರ ಕೊಡುತ್ತಿದ್ದಿರಿ? ಈಗ ನೀವು ಹೇಳಿದಂತೆ ನಿಲುವು ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು. ಎಲ್ಲರೂ ಸಾಲವನ್ನು ವಾಪಸು ಕಟ್ಟುತ್ತಿದ್ದರು. ಸೊಸೈಟಿಗಳು ಚೆನ್ನಾಗಿ ನಡೆಯುತ್ತಿದ್ದುವು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ ಪೂರ್ತಿ ಗೊತ್ತಿರುವವರಿಗೆ ಏನಾದರೂ ಹೇಳಬಹುದು, ಏನೂ ಗೊತ್ತೇ ಇಲ್ಲದವರಿಗೂ ಹೇಳಬಹುದು. ಆದರೆ ಅರ್ಧಂಬರ್ಧ ಗೊತ್ತಿರುವವರಿಗೆ ನಾವು ಬುದ್ಧವಾದವನ್ನು ಹೇಳುವುದಕ್ಕಾಗುವುದಿಲ್ಲ. ಅಸಲನ್ನು ವಜಾ ಮಾಡಿ, ಬಡ್ಡಿ ವಜಾ ಮಾಡಿ ಎಂದು ನಾನು ಯಾವತ್ತೂ ಕೂಡ ಹೇಳಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಆದಮೇಲೆ ಇದನ್ನೆಲ್ಲಾ ಶುರುಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಹಾರ್ಮೋನಿಯಂಅನ್ನು ಗುರ್ತಿಸಿದ್ದೀರಿ. ನಮ್ಮ ಹಿಂದೆ ಒಂದು ಪಿಟೀಲು ಇದೆ. ಅದನ್ನು ಎಲ್ಲಾದರೂ ತೆಗೆದು ಹೊರಗೆ ಹಾಕಿ. ಅದರಿಂದ ನಮಗೆ ಬಹಳ ಕಷ್ಟವಾಗಿದೆ. ಅದನ್ನು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ. ಅದು ಒಂದು ರೀತಿ ಮಕ್ಕಳು ಬಾರಿಸಿದಂತಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು 2 ವರ್ಷದಿಂದ ಹೇಳುತ್ತಲೇ ಇದ್ದೇನೆ. ನನ್ನನ್ನು ತೆಗೆಯುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಶಿವರಾಮೇಗೌಡರು ಯಾವಾಗ ಬರುತ್ತಾರೋ, ಏನು ಧ್ವನಿ ಬಾರಿಸುತ್ತಾರೋ, ನಮಗೆ ಏನೂ ಅರ್ಥವಾಗುವುದಿಲ್ಲ. ಅವರು ಯಾವಾಗ ಬಂದು ಇಲ್ಲಿ ಕುಳಿತುಕೊಳ್ಳುತ್ತಾರೋ ಗೊತ್ತಾಗುವುದಿಲ್ಲ, ಯಾವಾಗ ಬರುತ್ತಾರೋ, ಯಾವರಿತಿ ಧ್ವನಿಗೂಡಿಸುತ್ತಾರೋ ಅರ್ಥವಾಗುವುದಿಲ್ಲ. ಸಡನ್ ಆಗಿ ಬಂದು ಕುಳಿತುಬಿಡುತ್ತಾರೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ ನಾವು ಕಿರಿಯ ಸದಸ್ಯರಾಗಿ ಬಂದಿರತಕ್ಕಂಥವರು. ಹಿರಿಯ ಸದಸ್ಯರು ಹೇಳತಕ್ಕಂಥದ್ದೆಲ್ಲ ಸತ್ಯವಾದುದು, ಅದನ್ನು ನಾವು ಪಾಠದ ಹಾಗೆ ಕೇಳಿಕೊಂಡು ಹೋಗಬೇಕು, ಬೇರೆ ಸದಸ್ಯರಿಗೆ ಏನು ಗೊತ್ತಿಲ್ಲ, ಅವರೇ ಎಲ್ಲ ಗೊತ್ತಿರುವವರೆಂದು ನಾವು ಈ ಸದನಕ್ಕೆ ಬಂದವರು ತಿಳಿದುಕೊಂಡು ಹೋಗಬೇಕೆ ಸ್ವಾಮಿ? ಮಾನ್ಯ ವಿರೋಧ ಪಕ್ಷದ ನಾಯಕರು ಹೇಳತಕ್ಕಂಥ ಮಾತಿನ ಅರ್ಥ ಈರೀತಿ ಆಗುತ್ತದೆಯಲ್ಲ. ಅವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೂರಿಸಬೇಕೆಂದರೆ ಅವರು ಹೇಳುವುದೆಲ್ಲ ಸತ್ಯ, ಅದನ್ನು ನಂಬಿಕೊಂಡು ಹೋಗಿ ನಮ್ಮ ಜನರಿಗೆ ಹಿರಿಯ ಸದಸ್ಯರು ಹೇಳಿದ್ದು, ವಿರೋದಪಕ್ಷದವರು ಹೇಳಿದ್ದೆಲ್ಲ ಸತ್ಯವೆಂದು ಹೇಳಬೇಕಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು, ಮತ್ತು ಮಾನ್ಯ ಜಾಲಪ್ಪನವರು ಬಹಳ ಹಿರಿಯ ಸದಸ್ಯರು. ಅವರು ಬಹಳ ಕಾಲದಿಂದ ಈ ಕಡೆ, ಆ ಕಡೆ ಕುಳಿತು ಅನುಭವ ಇರತಕ್ಕಂಥವರು. ಯಾರಾದರೂ ಒಬ್ಬ ಸದಸ್ಯರು ಎದ್ದು ನಿಂತರೆ ಅವರಿಗೆ ಈ ಸದನದಲ್ಲಿ ಇರತಕ್ಕಂಥ ವಿಚಾರವನ್ನು ಪ್ರತಿಪಾದನೆ ಮಾಡಲಿಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ, ಕೊಡುತ್ತಲೂ ಇದ್ದೀರಿ. ಅವರಿಗೆ ಏನಾದರೂ ವಿಚಾರ ಗೊತ್ತಿದ್ದು, ಅದನ್ನು ಅವರು ಹೇಳಿದರೆ, ನಿಮಗೆ ಅರ್ಧಂಬರ್ಧ ಗೊತ್ತಿದೆ, ನಿಮ್ಮ ಮೇಲೆ ಕೊಲೆ ಅಪಾದನೆ ಇದೆ ಎಂದು

ಹೇಳುವುದು-ಇದನ್ನೆಲ್ಲ ಮಾಡುತ್ತಾರೆ. ನಮ್ಮನ್ನು ಈರೀತಿ ಹೇಳಿ ಕುಳ್ಳಿಸತಕ್ಕಂಥದ್ದು ಹಿರಿಯ ನಾಯಕರಿಗೆ ಭೂಷಣವಲ್ಲ, ದಯಮಾಡಿ ಅದನ್ನು ಅರ್ಥಮಾಡಿಕೊಂಡು ಹೇಳಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಸ್ವಾಮಿ, ಜವಾಬ್ದಾರಿಯುತವಾದ ಒಂದು ಸಂಸ್ಥೆಯ ಬಗ್ಗೆ ನಾವು ಮಾತನಾಡುವಾಗ ಏನಾದರೂ ಸರಿಯಾಗಿ ಗೊತ್ತಿದ್ದರೆ ಮಾತನಾಡಬೇಕು, ಗೊತ್ತಿಲ್ಲದೆ ಮಾತನಾಡಬಾರದೆಂದು ನಾನು ಅಂದುಕೊಂಡಿದ್ದೇನೆ. ನನ್ನ ಅಲ್ಪ ಸ್ವಲ್ಪ ಅನುಭವದಲ್ಲಿ, ಮಾನ್ಯ ಸದಸ್ಯರು ಹೇಳಿದರು. ನೀವು ನಾಮಿನೇಷನ್ ಹಾಕಿಸಿಕೊಂಡು ಹೋಗಿ ಅಧ್ಯಕ್ಷರಾದಿರಿ ಎಂದು.

ಅಧ್ಯಕ್ಷರು : ಅದಕ್ಕೆ ಉತ್ತರ ಕೊಟ್ಟಿದ್ದೀರಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಅದಕ್ಕೆ ನಾನು ಉತ್ತರ ಕೊಡಬೇಕಲ್ಲ, ಅದು ರೆಕಾರ್ಡ್‌ಗೆ ಹೋಗುತ್ತದೆ.

ಅಧ್ಯಕ್ಷರು : ನಾಮಿನೇಷನ್‌ನಿಂದ ನಾನು ಕೆಲಸ ಕಳೆದುಕೊಂಡನೇ ಹೊರತು ಸಂಪಾದನೆ ಮಾಡಲಿಲ್ಲವೆಂದು ಹೇಳಿದರಲ್ಲ but the other point is ಈಗ ಅಪೆಕ್ಸ್ ಬ್ಯಾಂಕ್ ಹಾಳಾಗಿಹೋಯಿತು. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಚ್ಚಿ ಹೋಗುವಂಥ ಸ್ಥಿತಿ ಬಂದಿದೆ. ಐದು ರೂಪಾಯಿ ಸಾಲ ಹುಟ್ಟುವುದಿಲ್ಲವೆಂದು ಹೇಳಿದಿರಲ್ಲ, ಅದಕ್ಕೆ ಕರಿಯಣ್ಣನವರು ಅದೆಲ್ಲ ಪ್ರಾರಂಭವಾದ ಬಗೆ ಹೇಗೆ? ಯಾರ ಕಾಲದಲ್ಲಿ ಪ್ರಾರಂಭವಾಯಿತು ಎಂದು ಒಂದು ಇನ್ನೋಸೆಂಟ್ ಪ್ರಶ್ನೆ ಕೇಳಿದರು ಅಷ್ಟೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಾನು ಸಹಕಾರಿ ಮಂತ್ರಿಯಾಗುವುದಕ್ಕೆ ಮೊದಲು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷನಾಗಿದ್ದೆ. ನನಗೆ ಸಹಕಾರಿ ಸಂಸ್ಥೆಗಳಲ್ಲಿ ಸುಮಾರು 20-25 ವರ್ಷಗಳ ಅಲ್ಪಸ್ವಲ್ಪ ಅನುಭವ ಇದೆ. ನಾನು ಅಧಿಕಾರಕ್ಕೆ ಬಂದಾಗ ಮಂತ್ರಿಮಂಡಲದಲ್ಲಿ ಚರ್ಚೆ ಮಾಡಿರುತ್ತೇನೆ. ಕಳೆದ 4-5 ವರ್ಷಗಳಲ್ಲಿ ವಿಪರೀತ ಬರಗಾಲ ಬಂದಿತ್ತು. ಹಣ ಬಹಳವಾಗಿ ಸುಸ್ತಿಯಾಗಿತ್ತು. ಅದರ ಜೊತೆಗೆ ನವಲಗುಂದ್, ನರಗುಂದ್‌ನಲ್ಲಿ ಗಲಾಟೆಗಳೂ ಕೂಡ ನಡೆದಿದ್ದು ನಮಗೆ ಬರಬೇಕಾದ ಹಣ ಬರುತ್ತಿರಲಿಲ್ಲ, ನಬಾರ್ಡ್‌ನವರಿಂದ ನಮಗೆ ಹಣ ಬರುತ್ತಿರಲಿಲ್ಲ ಮತ್ತು ಹಣವನ್ನು ಕೊಡುವುದಕ್ಕೆ ಅವರು ತಯಾರಿರಲಿಲ್ಲ, ರಿಸರ್ವ್ ಬ್ಯಾಂಕ್‌ನವರಿಂದಲೂ ಸಹ ಹಣ ಸಿಕ್ಕುತ್ತಿರಲಿಲ್ಲ, ಡಿಪಾಸಿಟರ್ಸ್‌ಗೆ ಬಡ್ಡಿಯನ್ನು ಕೊಡುವುದಕ್ಕೆ ಆಗುತ್ತಿಲ್ಲವೆಂದು ಎಲ್ಲ ಅಂಕಿಅಂಶಗಳನ್ನು ಮುಂದಿಟ್ಟಾಗ ಕ್ಯಾಬಿನೆಟ್ ಒಂದು ಡಿಸಿಷನ್ ತೆಗೆದುಕೊಂಡಿತು. ಅದೇನೆಂದರೆ, ಬಡ್ಡಿ ವಜಾ ಮಾಡಿಬಿಡೋಣ, ಅಸಲು ಕೊಡಲಿ ಎಂದು ತೀರ್ಮಾನ ತೆಗೆದುಕೊಂಡಿತು. ಮತ್ತು ನಾವು ಏನು ಅವತ್ತು ನಮ್ಮ ಪ್ರಣಾಲಿಕೆಯಲ್ಲಿ ಬಡ್ಡಿ ಬಿಡುತ್ತೇವೆಂದು ಹೇಳಿದ್ದೆವು, ಬಡ್ಡಿ ಬಿಡಲಿಕ್ಕೆ ಯಾರು ಸಕಾಲದಲ್ಲಿ ಹಣ ವಾಪಸ್ ಕೊಡುತ್ತಾರೋ ಅವರಿಗೆ ಏಳು ರೂಪಾಯಿ ಬಡ್ಡಿಯಲ್ಲಿ ಹಣವನ್ನು ಕೊಡೋಣವೆಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೆವು. ಸ್ವಾಮಿ, 70-80 ಪರ್ಸೆಂಟ್ ಇದರಿಂದ ವಸೂಲಾಯಿತು. ಎಲ್ಲ ಇನ್ಸಿಟ್ಯೂಷನ್ಸ್‌ಗೂ ವಯಬಿಲಿಟಿ ಬಂದಿತು. ಮತ್ತು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಏನು 30-40 ಕೋಟಿ ಹಣ ಕೊಡುತ್ತಿದ್ದರು ಅದು 70 ಕೋಟಿಯ ಅಷ್ಟು ಹಣ ಕೊಡುವಂತಾಯಿತು. ರಾಜ್ಯ ಅಪೆಕ್ಸ್ ಬ್ಯಾಂಕ್‌ನಲ್ಲಿಯೂ ಕೂಡ ಸುಮಾರು 30-40 ಪರ್ಸೆಂಟ್‌ನಷ್ಟು ಹಣ ರೈತರಿಗೆ ಜಾಸ್ತಿ ಸಿಕ್ಕಿತು. ನನ್ನ 25-30 ವರ್ಷಗಳ ಸಹಕಾರಿ ಜೀವನದಲ್ಲಿ ಒಂದು ದಿವಸವೂ ನಾನು ಲೋನ್ ವೇವ್ ಆಗಬೇಕೆಂದು ಕೇಳಲಿಲ್ಲ, ನಾನು ಅದನ್ನು ಅಪೋಸ್ ಮಾಡಿದ್ದೇನೆ. ಮಂತ್ರಿಮಂಡಲದಲ್ಲಿಯೂ ಕೂಡ ನಾನು ಅಪೋಸ್ ಮಾಡಿದ್ದೇನೆ.

ಶ್ರೀ ಪಿ. ಬಸವರಾಜ್ : ಹತ್ತು ಸಾವಿರ ರೂಪಾಯಿ ಮನ್ನಾ ಮಾಡಲಿಕ್ಕೆ ಯಾರು ಹೇಳಿದರು, ಯಾವ ಪಕ್ಷ ಹೇಳಿತು.

ಶ್ರೀ ಆರ್.ಎಲ್. ಜಾಲಪ್ಪ : ಇದು 10 ಸಾವಿರ ರೂಪಾಯಿ ಕೇಂದ್ರ ಸರ್ಕಾರದ್ದು. 10 ಸಾವಿರ ರೂಪಾಯಿಗಳ ಬಗ್ಗೆ ಯಾವುದಾದರೂ ಒಂದು ತೀರ್ಮಾನ ತೆಗೆದುಕೊಂಡು ಬೇಗ ಪರಿಹಾರ ಮಾಡದಿದ್ದರೆ ಬ್ಯಾಂಕ್‌ಗಳು, ಸಂಸ್ಥೆಗಳು ಸಫರ್ ಆಗುತ್ತವೆ ಎಂದು ಹೇಳಿದ್ದೇನೆ. ವಿನಃ ಯಾವುದೇ ಲೋನ್ ವೇವ್‌ಗೆ ಯಾವತ್ತೂ ನನ್ನ ಜಾಯಮಾನದಲ್ಲಿ ಹೇಳಲಿಲ್ಲ. ಸನ್ಮಾನ್ಯ ಶಿವರಾಮೇಗೌಡರು ಹಿರಿಯ ಸದಸ್ಯರು ನಮ್ಮನ್ನು ಕರ್ಬ್ ಮಾಡಿದರೆ ಹೇಗೆ ಎಂದು ಕೇಳಿದರು. ನಾನು ಕರ್ಬ್ ಮಾಡಲಿಕ್ಕೆ ತಯಾರಾಗಿಲ್ಲ. ಸ್ವಾಮಿ ಅವರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಅವರು ನಮ್ಮ ಮೇಲೆ ಏನಾದರೂ ಚಾರ್ಜಸ್ ಮಾಡಬೇಕಾದರೆ, ಹಿರಿಯ ಸದಸ್ಯರ ಬಗ್ಗೆ ಮಾತನಾಡಬೇಕಾದರೆ ಸ್ವಲ್ಪ ತಾವು ಪೂರ್ತಿಯಾಗಿ ಅರ್ಥಮಾಡಿಕೊಂಡು ಮಾತನಾಡಿ. ನಾವೇನು ಇಂದ್ರಲೋಕದಿಂದ ಬಂದಿಲ್ಲ, ನಾವೂ ಬೇಕಾದಷ್ಟು ತಪ್ಪುಗಳನ್ನು ಮಾಡಿದ್ದೇವೆ.

ನಾವು ಹಲವಾರು ತಪ್ಪುಗಳನ್ನು ಮಾಡಿದ್ದೇವೆ. ನಾವು ಸತ್ಯ ಹರಿಶ್ಚಂದ್ರರು, ಆಕಾಶದಿಂದ ಬಂದಿದ್ದೇವೆಂದು ಹೇಳುವುದಕ್ಕೆ ತಯಾರಿಲ್ಲ. ಆದರೆ ತಾವು ಚಾರ್ಜಸ್ ಮಾಡುವಾಗ ತಮಗೆ ಏನಾದರೂ ಗೊತ್ತಿದ್ದರೆ ಬೇಕಾದರೆ ಚಾರ್ಜಸ್ ಮಾಡಿ. ಸುಮ್ಮ ಸುಮ್ಮನೆ ಏಕೆ ಮಾತನಾಡುತ್ತೀರಿ. ಆದುದರಿಂದ ನಾನು ಹೇಳಿದೆನೇ ವಿನಃ ಕರಿಯಣ್ಣನವರನ್ನು ಕರ್ಬ್ ಮಾಡುವುದಕ್ಕಾಗಲಿ.......

ಶ್ರೀ ಕರಿಯಣ್ಣ : ಸಾಲ ಕೊಡದೇ ಹೋದರೆ ರೈತರ ಜಮೀನನ್ನು ಹರಾಜು ಹಾಕಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ಕಾನೂನನ್ನು ಅವರೇ ಮಾಡಿದ್ದಾರೆ. ಅವರು ಕಾನೂನು ಮಾಡಿರುವುದನ್ನು ಹೇಳಿದ್ದೇನೆ. ಇಲ್ಲದಿರುವುದನ್ನು ಹೇಳಿಲ್ಲ. ಗೊತ್ತಿರುವ ವಿಚಾರವನ್ನೇ ಹೇಳಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಲ್ಯಾಂಡ್ ಡೆವೆಲೆಪ್‌ಮೆಂಟ್ ಬ್ಯಾಂಕಿನಲ್ಲಿ ನನ್ನದು ನಾಲ್ಕೂವರೆ ಲಕ್ಷ ರೂಪಾಯಿ ಸಾಲ ಇದೆ ಅದನ್ನು ಕೊಡಬೇಕು. ನನಗೆ ಕೊಡುವ ಶಕ್ತಿ ಇದೆ ಕೊಡದೇ ಹೋದರೆ ಬ್ಯಾಂಕ್ ಹೇಗೆ ನಡೆಯಬೇಕು? ಅಂಥ ಸಂದರ್ಭದಲ್ಲಿ ನನ್ನ ಜಮೀನನ್ನು ಹರಾಜು ಹಾಕುವುದು ಬೇಡವೆ? ಸಣ್ಣ ರೈತರ ಅತಿ ಸಣ್ಣ ರೈತರ ಜಮೀನನ್ನು ಮುಟ್ಟುವುದಿಲ್ಲವೆಂದು ಹೇಳಿದ್ದೇವೆ ಅವರ ಗೋಜಿಗೆ ಹೋಗುವುದಿಲ್ಲವೆಂದು ಸದನದಲ್ಲಿ ಭರವಸೆ ಕೊಟ್ಟಿದ್ದೇವೆ ಮತ್ತು ಅವರಿಗೆ ಬರೆದುಕಳಿಸಿದ್ದೇವೆ. ಆರ್ಡರ್ ಮಾಡಿದ್ದೇವೆ. ತಪ್ಪು ಏನು ಸ್ವಾಮಿ ಇದರಲ್ಲಿ? ಹಾಗಾದರೆ ಇವತ್ತಿನ ದಿವಸ ಸೆಕ್ಷನ್ 105ನ್ನು ತೆಗೆದು ಹರಾಜು ಮಾಡುವುದನ್ನು ನಿಲ್ಲಿಸುತ್ತೀರಾ? ನಾವು ಯಾರ ಜಮೀನನ್ನು ಹರಾಜು ಮಾಡುವುದಿಲ್ಲವೆಂದು ಸದನದಲ್ಲಿ ಮಾನ್ಯ ಸಹಕಾರ ಮಂತ್ರಿಗಳು ಹೇಳಲಿ.

ಅಧ್ಯಕ್ಷರು : ಆ ಬಗ್ಗೆ ಡಿಮ್ಯಾಂಡ್ ಬಂದಾಗ ತೀರ್ಮಾನ ಮಾಡೋಣ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಈಗಾಗಲೇ ಹೇಳಿದ್ದೇನೆ, ಈ ಸರ್ಕಾರದಲ್ಲಿ ಈ ಸಹಕಾರಿಗಳು ಕೆಟ್ಟಷ್ಟು ಯಾರೂ ಕೆಡಲಿಲ್ಲ ಮತ್ತು ಸಹಕಾರ ಸಂಸ್ಥೆಗಳು ಹೋದಷ್ಟು ಯಾವುವೂ ಹೋಗಲಿಲ್ಲ. ಅವುಗಳನ್ನು ಹಾಳುಮಾಡಿ ಇನ್ನು ಮುಂದೆ ಯಾವತ್ತೂ ರೆಕವರಿ ಆಗದ ಹಾಗೆ ಮಾಡಿದ್ದಾರೆ. ಹಿಂದೆ ಎ.ಪಿ.ಎಂ.ಸಿ. ಆಕ್ಟ್ ತಂದದ್ದು ಮಾನ್ಯ ಕೆ.ಹೆಚ್. ಪಾಟೀಲರಿಗೆ ಗೊತ್ತಿದೆ. ಆ ಆಕ್ಟ್ ತರಬೇಕಾದರೆ ರೈತ ತನ್ನ ಮಾಲನ್ನು ಮಾರ್ಕೆಟ್ ಸಭಾಂಗಣಕ್ಕೆ ಮಾರುವುದಕ್ಕೆ ತಂದಾಗ ಅವನಿಂದ ಕಮಿಷನ್‌ದಾರ ಯಾವುದೇ ರೀತಿಯ ಕಮಿಷನ್ ವಸೂಲ್ಮಾಡಬಾರದೆಂದೂ ಮತ್ತು ಖರ್ಚುಗಳನ್ನೂ ಕೂಡ ಆತನಿಂದ ತೆಗೆದುಕೊಳ್ಳಬಾರದೆಂದೂ ಹಾಗೇನಾದರೂ ವಸೂಲ್ಮಾಡಿದರೆ ಶಿಕ್ಷಾರ್ಹ ಎಂದು ಅಮೆಂಡ್‌ಮೆಂಟ್ ತಂದೆ. ಅದು ನಮ್ಮ ಪಕ್ಷದಲ್ಲೇ

3 ದಿನ ಚರ್ಚೆಯಾಯಿತು, ನಂತರ ಒಪ್ಪಿಕೊಂಡರು. ನಾವು ಅದನ್ನು ಸದನದಲ್ಲಿ ಮಂಡಿಸಿದಾಗ ಮಾನ್ಯ ಕೆ.ಹೆಚ್. ಪಾಟೀಲರು ಹೇಳಿದರು, ಕಳೆದ 35 ವರ್ಷಗಳಿಂದ ನಾವು ತರುವುದಕ್ಕೆ ಆಗಿರಲಿಲ್ಲ, ಈಗ ಜಾಲಪ್ಪನವರು ತಂದಿದ್ದಾರೆ ಇದನ್ನು ಸರ್ವಾನುಮತದಿಂದ ಒಪ್ಪಿಕೊಳ್ಳೋಣ ಎಂದು ಹೇಳಿದರು. ಇವತ್ತು ಅವರಿಗೆ ನಾನು ಋಣಿಯಾಗಿದ್ದೇನೆ ಮತ್ತು ಮೊದಲಿನಿಂದಲೂ ಅವರಿಗೆ ಅಭಾರಿಯಾಗಿದ್ದೇನೆ. ಆದರೆ ಇವತ್ತು ಆಗುತ್ತಿರುವುದೇನು? ಕಳೆದ 2-3 ವರ್ಷಗಳಿಂದ ಕಮಿಷನ್ ಏಜೆಂಟ್‌ಗಳನ್ನು ಕೇಳುವವರಿಲ್ಲ, ಅವರು ರೈತರಿಂದ ಎಂಟರಿಂದ ಹತ್ತು ಪರ್ಸೆಂಟ್ ಕಮಿಷನ್ ತೆಗೆದುಕೊಳ್ಳುತ್ತಾರೆ. ರೈತರಿಂದ ಏನೂ ತೆಗೆದುಕೊಳ್ಳಬಾರದೆಂದು ಕಾನೂನು ಮಾಡಿದ್ದೇವೆ. ಯಾರು ಮರ್ಚೆಂಟ್ಸ್ ಹರಾಜಿನಲ್ಲಿ ಕೊಂಡುಕೊಳ್ಳುತ್ತಿದ್ದಾರೆ ಅವರಿಂದಲೂ ವಸೂಲ್ಮಾಡುತ್ತಿದ್ದಾರೆ. ಈ ಶೋಷಣೆಗೆ ಹೋರಟಿದ್ದಾರಲ್ಲ ಅವರ ಬಗ್ಗೆ ಯೋಚನೆ ಮಾಡಿದ್ದೀರಾ? ಎಪಿಎಂಸಿಗಳಿಗೆ ಎಲಿಕ್ಷನ್ ಅನ್ನು ಏತಕ್ಕೆ ಎರಡು ವರ್ಷಗಳಿಂದ ಮಾಡುತ್ತಿಲ್ಲ? ರೈತರು ಎಂದರೆ ಏನು ಬೇಕಾದರೂ ಮಾಡಬಹುದು, ಯಾರು ಬೇಕಾದರೂ ಅವರ ಅಂಗಾಂಗಗಳನ್ನು ಕೊಯ್ದುಕೊಂಡು ಹೋಗಬಹುದೆಂದು ನಿಮ್ಮ ಭಾವನೆಯೇ? ಅವರನ್ನು ಶೋಷಣೆ ಮಾಡುತ್ತಿದ್ದೀರಲ್ಲ, ಅವರ ರಕ್ತ ಹೀರುತ್ತಿದ್ದೀರಲ್ಲ, ಅವರು ಹೇಗೆ ನಿಮ್ಮಲ್ಲಿ ನಂಬಿಕೆ ಇಟ್ಟುಕೊಳ್ಳಬೇಕು. ರೈತ ಪ್ರತಿನಿಧಿಗಳು ಬಹಳಷ್ಟು ಜನ ಇಲ್ಲಿ ಆರಿಸಿ ಬಂದಿದ್ದೇವಲ್ಲ ನಮಗೆ ಇದು ಗೊತ್ತಾಗದೆ ಇದ್ದರೆ ರೈತನನ್ನು ಉಳಿಸುವುದು ಹೇಗೆ? ಈಗಲಾದರೂ ಬೇಗ ಚುನಾವಣೆ ಮಾಡಿ, ನಿಮ್ಮ ಪಕ್ಷದವರೇ ಗೆದ್ದು ಬರಲಿ, ಇದರಿಂದ ರೈತರಿಗೆ ಸ್ವಲ್ಪವಾದರೂ ಪ್ರಯೋಜನ ಸಿಗುತ್ತದೆ. ನಾಲ್ಕು ವರ್ಷಗಳಿಂದ ಅಡ್ಮಿನಿಸ್ಟ್ರೇಟರನ್ನು ಹಾಕಿ ಅವರ ಶೋಷಣೆ ನಡೆಯುತ್ತಿದೆ. ಇದು ಒಳ್ಳೆಯ ಸರ್ಕಾರ ಮಾಡುವ ಕೆಲಸವೆ? ಇನ್ನಾದರೂ ಎಚ್ಚೆತ್ತುಕೊಂಡು ಚೆನ್ನಾಗಿ ಮಾಡುತ್ತೀರೆಂದು ನಾನು ಅಂದುಕೊಂಡಿದ್ದೇನೆ, ಇನ್ನು ಈ "Model Village with Model Farmers" ಕಾರ್ಯಕ್ರಮದಡಿಯಲ್ಲಿ ತಾವು ಜಿಲ್ಲೆಗೆ ಒಂದೊಂದು ಮಾಡೆಲ್ ವಿಲೇಜ್ ಮಾಡುತ್ತೇವೆಂದು ಹತ್ತು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಐದು ತಿಂಗಳಾದರೂ ಆ ಹಳ್ಳಿ ಯಾವುದು ಎಂದು ಐಡೆಂಟಿಫೈ ಮಾಡಿದ ಹಾಗೆ ಕಾಣುವುದಿಲ್ಲ. ಈ ಯೋಜನೆಯನ್ನು ಕೈಬಿಟ್ಟು ಆ ಹತ್ತು ಕೋಟಿ ರೂಪಾಯಿಗಳನ್ನು ಪವರ್ ಷಾರ್ಟೇಜ್ ಏನಿದೆ ಅದಕ್ಕೆ ಉಪಯೋಗಿಸಿ ಗೋಬರ್ ಗ್ಯಾಸ್ ಪ್ಲಾಂಟ್‌ಗೆ ಸಬ್ಸಿಡೈಸ್ ಮಾಡಿ. ಸೋಲಾರ್ ಎನರ್ಜಿ ಯೂಸ್ ಮಾಡುವವರಿಗೆ ಸಬ್ಸಿಡೈಸ್ ಮಾಡಿ. ಡಿಸ್ಟ್ರಿಕ್ಟ್‌ಗೆ ಒಂದು ಮಾಡೆಲ್ ವಿಲೇಜ್ ಮಾಡುವುದರಿಂದ ಯಾರೂ ಉದ್ಧಾರ ಆಗುವುದಿಲ್ಲ. ಈ ಮಾಡಲ್ ವಿಲೇಜ್ಗಳನ್ನು ಮಾಡುವುದರಿಂದ 50 ಸಂಸಾರಗಳು ಉದ್ಧಾರವಾಗಬಹುದು. ಇದನ್ನು ನಾನು ತಮ್ಮ ಬಜೆಟ್ ಭಾಷಣದ ಪುಟ 41ನ್ನು ತೆಗೆದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾಡಲ್ ಫಾರ್ಮರ್ಸ್ ಮಾಡಬೇಕೆಂದು ನಾನು ಕೃಷಿ ಸಚಿವನಾಗಿದ್ದಾಗ ಅನೌನ್ಸ್ ಮಾಡಿದ್ದೆ. ಒಂದೊಂದು ಮಂಡಲ ಪಂಚಾಯಿತಿಯಲ್ಲಿ ಒಬ್ಬರು ಮಾಡಲ್ ಫಾರ್ಮರ್ ಇದ್ದರೆ ನೋಡಿಕೊಳ್ಳಬಹುದು. ಅನುಕೂಲವಾಗುತ್ತದೆಂದು ನಾವು ಮಾಡಿದ್ದೆವು. ಮಾಡಲ್ ವಿಲೇಜ್ ಸ್ಕೀಂ ಎಂದು ಬಜೆಟ್ ಏನಿದೆ ಇದಕ್ಕೆ10 ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಪ್ರತ್ಯೇಕ. ಪ್ಲಾನಿಂಗ್ ಕಮಿಷನ್‌ನವರು ಹೇಳಿದ್ದಾರೆ. 1991-92ಕ್ಕೆ 1500 ಕೋಟಿ ರೂಪಾಯಿ ಬಂತಲ್ಲ ಅದರಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ನಾವು ಕರ್ನಾಟಕಕ್ಕೆ ಕೊಡುತ್ತಿದ್ದೇವೆ, ಅದರಲ್ಲಿ ಪ್ರತಿ ಜಿಲ್ಲೆಯಲ್ಲಿ ಒಂದು ಮಾಡಲ್ ವಿಲೇಜ್ ಮಾಡಬೇಕೆಂದು ಅವರೇ ಹೇಳಿದ್ದಾರೆ. ಇದನ್ನು ನಾವು ಇಲ್ಲಿ ಪ್ರತಿಪಾದನೆ ಮಾಡಿದ್ದೇವೆಯೇ ವಿನಃ ನಮ್ಮದು ಸ್ಪೆಷಲ್ ಆಗಿ ಏನೂ ಇಲ್ಲ, ಇದನ್ನು ಅಡೀ ಇಂಡಿಯಾದಲ್ಲಿ ಮಾಡುತ್ತಿದ್ದಾರೆ, ಕರ್ನಾಟಕದಲ್ಲಿ ಮಾತ್ರ ಅಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಈ ಯೋಜನೆಯನ್ನು ಇಡೀ ಇಂಡಿಯಾದಲ್ಲಿ ಮಾಡಿ ಹಣ ಅವರೇ ಕೊಡುವುದಾದರೆ ಸಂತೋಷ. ಆದರೆ ನಮ್ಮ ಬೊಕ್ಕಸದಿಂದ ಖರ್ಚು ಮಾಡುವುದಾದರೆ ಇದರಿಂದ ಪ್ರಯೋಜನವಾಗುವುದಿಲ್ಲ. 5 ಸಾವಿರ, 3 ಸಾವಿರ ಗೋಬರ್ ಗ್ಯಾಸ್ ಪ್ಲಾಂಟ್‌ಗೆ ಮತ್ತು ಸೋಲಾರ್ ಎನರ್ಜಿ ಪ್ಲಾಂಟ್‌ಗೆ ಕೊಡುತ್ತಿದ್ದೀರೋ ಅದನ್ನು 50 ಪರ್ಸೆಂಟ್ ಮಾಡಿ, ಅದನ್ನು ಹೆಚ್ಚು ಜನ ಉಪಯೋಗಿಸಿಕೊಳ್ಳುವಂತೆ ಮಾಡಿದರೆ ಪವರ್ ಸಪ್ಲೈ ಕಡಿಮೆ ಇರುವಾಗ ಅನುಕೂಲವಾಗುತ್ತದೆ. ಅದನ್ನು ದಯವಿಟ್ಟು ಮಾಡಿ ಎಂದು ಸೂಚನೆ ಕೊಡುತ್ತಿದ್ದೇನೆ. ಆಮೇಲೆ ಮಾನ್ಯ ಬಂಗಾರಪ್ಪನವರಲ್ಲಿ ಒಂದು ಆಬ್ಸರ್ವ್ ಮಾಡಿದ್ದು ಏನೆಂದರೆ, ಮೊದಲು ಆರ್ಡರ್ ಮಾಡಿ ಆಮೇಲೆ ಯೋಚನೆ ಮಾಡಿದಂತೆ ಕಾಣುತ್ತದೆ. ಹೆಂಡ ತೆಗೆದಿರಿ ಸಂತೋಷ. ಕಲಬೆರಕೆಯಾಗುತ್ತಿತ್ತು ಎಂದು ಎಲ್ಲಾ ತೆಗೆದುಬಿಟ್ಟಿದ್ದೀರಿ. ಆದರೆ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಿಲ್ಲ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಡ ಮಾರುತ್ತಿದ್ದಾರೆ. ಅವರನ್ನು ದಿನಾ ಎಕ್ಸೈಜ್‌ನವರು ಹೆದರಿಸುತ್ತಾರೆ, ಪೊಲೀಸರು ಹೆದರಿಸುತ್ತಾರೆ, ಪುಢಾರಿಗಳು ಹೆದರಿಸುತ್ತಾರೆ. ಅವರಿಗೆ ಸಿಗುವ ನಾಲ್ಕು ಕಾಸನ್ನು ಇವರೆಲ್ಲಾ ಹಂಚಿಕೊಂಡು ತಿನ್ನುತ್ತಿದ್ದಾರೆ. ತಾವು ಅದನ್ನು ಏತಕ್ಕೆ ರೆಗ್ಯುಲರೈಸ್ ಮಾಡಬಾರದು? ಏನು ಕಷ್ಟ ತಮಗೆ? ಕೆಲವು ತಾಲ್ಲೂಕುಗಳಲ್ಲಿ ಹೆಂಡ ಮಾರುವುದಕ್ಕೆ ಪರವಾನಗಿ ಕೊಟ್ಟಿದ್ದೀರಿ. ರಾಯಚೂರು ಜಿಲ್ಲೆಯಲ್ಲಿ ಯಾವುದೋ ಎರಡು ತಾಲ್ಲೂಕಿಗೆ ಹೆಂಡ ಮಾರುವುದಕ್ಕೆ ಪರವಾನಗಿ ಕೊಟ್ಟು ಅದನ್ನು ಹರಾಜು ಹಾಕಿ ಮರ ಎಲ್ಲಿ ಸ್ವಾಮಿ ಟ್ಯಾಪ್ ಮಾಡುವುದು? ಹಿರಿಯೂರಿನಲ್ಲಾ? ಹಿರಿಯೂರಿನಲ್ಲಿ ಮರ ಇಲ್ಲ ಎಂದು ಹೆಂಡ ಮುಚ್ಚಿದ್ದಿರಿ. ಅವರು ಹೆಂಡ ಇಳಿಸುತ್ತಿದ್ದವರು, ಮಾರುತ್ತಿದ್ದವರು ಬಾಟಲ್ ತೊಳೆಯುತ್ತಾ ಇದ್ದವರು, ಕೂಲಿ ಕೆಲಸ ಮಾಡುತ್ತಿದ್ದವರು ಅನ್ನಕ್ಕೆ ಅಲೆಯುತ್ತಿದ್ದಾರೆ. ಅವರಿಗೆ ಬೇರೆ ಏನೂ ಕಸಬು ಬರುವುದಿಲ್ಲ. ಬೇರೆ ಕೆಲಸ ಬರುವುದಿಲ್ಲ. ಒಬ್ಬ ಉತಾರ್‌ದಾರನನ್ನು ಕರೆದುಕೊಂಡು ಬಂದು ನಮ್ಮ ಜಮೀನಿನಲ್ಲಿ ಕೆಲಸ ಮಾಡು ಎಂದರೆ ಮೂರು ದಿವಸ ಇರಲಿಲ್ಲ, ಓಡಿಹೋದ. ಏಕೆಂದರೆ ಅವನಿಗೆ ಜಮೀನಿನಲ್ಲಿ ಕೆಲಸ ಮಾಡಿ ರೂಢಿ ಇಲ್ಲ. ಈಗ ರಾಯಚೂರಿನಲ್ಲಿ ಹೆಂಡದ ಅಂಗಡಿ ಕೊಟ್ಟು, ಹಿರಿಯೂರಿನಲ್ಲಿ ಮರ ಟ್ಯಾಪ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ. ಇದು ಯಾವ ತತ್ವ ಸ್ವಾಮಿ, ನನಗೆ ಅರ್ಥವಾಗಲಿಲ್ಲ. ಇದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕು. ದಯಮಾಡಿ ಎಲ್ಲೆಲ್ಲಿ ಮರ ಇದೆಯೋ ಅಲ್ಲಲ್ಲಿ ಹೆಂಡ ಇಳಿಸುವುದಕ್ಕೆ ಅವಕಾಶ ಕೊಡಿ. ಕೊಡದಿದ್ದರೆ ಮುಚ್ಚಿಬಿಡಿ. ಅಲ್ಲೊಂದು ಕಡೆ ಇಲ್ಲೊಂದು ಕಡೆ ಕೊಡುವುದು ಮಾಡುವುದಕ್ಕೆ ಹೋಗಬೇಡಿ. ಏನಾದರೂ ಪರ್ಯಾಯ ವ್ಯವಸ್ಥೆ ಮಾಡಿ. ನೀವು ಸಮಾಜವಾದಿಗಳು. ಇವೆಲ್ಲ ನಿಮಗೆ ಗೊತ್ತಾಗಬೇಕು, ನಿಮಗೆ ಗೊತ್ತಾಗದಿದ್ದರೆ ಬೇರೆ ಯಾರಿಗೂ ಗೊತ್ತಾಗುವುದಿಲ್ಲ, ಅಥವಾ ಗೊತ್ತಾಗಿಯೂ ಸುಮ್ಮನಿದ್ದೀರೋ ನನಗಂತೂ ಅರ್ಥವಾಗುವುದಿಲ್ಲ. ದಯಮಾಡಿ ಇದರ ಕಡೆ ಗಮನ ಕೊಡಿ. ಯಾವುದಾದರೂ ಒಂದು ಪಾಲಿಸಿ ಮಾಡಿದಾಗ, ಆ ಪಾಲಿಸಿ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಅದು ಯಶಸ್ವಿಯಾಗುವಂತೆ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ವಿಶ್ವಾಸ ಇಟ್ಟುಕೊಳ್ಳುವುದು ಅನಾವಶ್ಯಕ ಎಂದು ನಾನು ಅಂದುಕೊಂಡಿದ್ದೇನೆ. ಇನ್ನು ಜಿಲ್ಲಾ ಪರಿಷತ್ತುಗಳು. ಜಿಲ್ಲಾ ಪರಿಷತ್ತುಗಳನ್ನು ಏನು ಮಾಡಿದ್ದೀರಿ ಸ್ವಾಮಿ? ತಮಗೆ ಡೀಸೆಂಟ್ರಲೈಸೇಷನ್ನಲ್ಲಿ ನಂಬಿಕೆ ಇಲ್ಲದಿದ್ದರೆ ಆ ಆಕ್ಟ್‌ನ್ನು ತೆಗೆದುಹಾಕಿ. ಅದರ ಬದಲು ಪ್ರತಿ ದಿನವೂ ಅವರ ಕುತ್ತಿಗೆ ಹಿಸುಕಬೇಡಿ. ಸನ್ಮಾನ್ಯ ಬಸವಲಿಂಗಪ್ಪನವರು ಅಧಿಕಾರಿಗಳನ್ನು ಕರೆಸಿದರು. ಚೀಫ್ ಸೆಕ್ರೆಟರಿಯವರನ್ನು ಮತ್ತು ಎಲ್ಲಾ ಅಧಿಕಾರಿಗಳನ್ನು ಕರೆಸಿದರು ಅಲ್ಲೊಂದು ಇಲ್ಲೊಂದು ಸರಿಯಾಗಿ ಕೆಲಸ ಮಾಡದೇ ಇರಬಹುದು. ಇವತ್ತು ಸರ್ಕಾರದ ಎಲ್ಲಾ ಇಲಾಖೆಗಳೆಲ್ಲಾ ಸರಿಯಾಗಿ ಕೆಲಸ ಮಾಡುತ್ತಿದೆಯೇ? ಇವತ್ತಿನ ದಿವಸ ಎಲ್ಲ ಮಂತ್ರಿಗಳೂ ಸರಿಯಾಗಿ ಕೆಲಸ ಮಡುತ್ತಿದ್ದಾರೆಯೇ? ನಾವು

ಮಂತ್ರಿಮಂಡಲದಲ್ಲಿ ಇದ್ದೆವಲ್ಲ ನಾವೆಲ್ಲಾ ಸರಿಯಾಗಿ ಕೆಲಸ ಮಾಡುತ್ತಿದ್ದೇವೆಯೇ? ಇಲ್ಲ. ಅಲ್ಲೊಂದು ಇಲ್ಲೊಂದು ತಪ್ಪು ಇರಬಹುದು. ತಪ್ಪುಗಳಿವೆ, ಇಲ್ಲ ಎಂದು ಯಾರೂ ಹೇಳುವುದಿಲ್ಲ. ಅದಕ್ಕೋಸ್ಕರ ನೀವು ಮಸಲತ್ತು ಮಾಡಿ ಅಧಿಕಾರಿಗಳನ್ನು ಕರೆಸಿ ಅಧಿಕಾರೇತರರ ಮೇಲೆ, ಅಧ್ಯಕ್ಷರ ಮೇಲೆ ಎತ್ತಿಕಟ್ಟಿದ್ದೀರಲ್ಲ ಇದು ಯಾರೂ ಮಾಡುವಂಥ ಕೆಲಸ ಅಲ್ಲ, ಇದು ಬಹಳ ಅಪರಾಧದ ಕೆಲಸ ಎಂದು ನಾನು ಇವತ್ತು ಹೇಳುತ್ತೇನೆ. ಮೈನರ್ ಇರಿಗ್ಯೆಷನ್ ವಾಪಸ್ ತೆಗೆದುಕೊಳ್ಳುತ್ತೇನೆ ಎಂದು ಈಗಾಗಲೇ ಮೈನರ್ ಇರಿಗೇಷನ್ ಮಂತ್ರಿಗಳನ್ನು ಬಯಪಡಿಸುತ್ತಿದ್ದಾರೆ. ಕುಡಿಯುವ ನೀರನ್ನು ತೆಗೆದುಕೊಳ್ಳುತ್ತೇವೆಂದು ಸ್ಕೇರ್ಸಿಟಿಯಲ್ಲಿ ಕುಡಿಯುವ ನೀರಿಗೆ ಬೋರ್ ವೆಲ್‌ಗಳು ಮಾಡಬೇಕೆಂದು ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದ ಹಣವನ್ನು ತೆಗೆದು ಜಿಲ್ಲಾಧಿಕಾರಿಗಳಿಗೆ ಕೊಟ್ಟಿರಿ. ಜಿಲ್ಲಾಧಿಕಾರಿಗಳಿಗೆ ಕೊಟ್ಟಾಗ ಅವರಿಗೆ ಲಿಮಿಟ್ ಇಲ್ಲ. ಎಷ್ಟು ಬೇಕಾದರೂ ಅವರು ಖರ್ಚು ಮಾಡಬಹುದು. ಒಂದು ಬೋರ್ ವೆಲ್‌ಗೆ 80 ರೂಪಾಯಿ ಒಂದು ಅಡಿಗೆ ಇವರು ಕಡುತ್ತಾ ಇದ್ದರೆ, 120 ರೂಪಾಯಿ ಅವರು ಕೊಡಬಹುದು. ಇದೆಲ್ಲಾ ಕೊಟ್ಟಿರಿ ನಿಮ್ಮ ಕಡೆಯವರನ್ನು ಪ್ಲೀಸ್ ಮಾಡಿಸುವುದಕ್ಕೆ. ಇದರಿಂದ ಏನಾಯಿತು ಸ್ವಾಮಿ? ಎಷ್ಟು ಅನಾಹುತ ಆಯಿತು ಎಂಬುದನ್ನು ಯೋಚನೆ ಮಾಡಿದ್ದೀರಾ ಸ್ವಾಮಿ? ಸ್ಪೆಷಲ್ ಕಾಂಪೊನೆಂಟ್ ಸ್ಕೀಂನಲ್ಲಿ ಜಿಲ್ಲಾ ಪರಿಷತ್ತಿನವರು ಹರಿಜನಗಿರಿಜನರಿಗೆ ಬಾವಿಗಳನ್ನು ತೋಡಿಸಿ ಕೊಡುತ್ತಿದ್ದರು, ಬೋರ್ ವೆಲ್ಸ್ ಹಾಕಿಸಿಕೊಡುತ್ತಿದ್ದರು. ಆ ಕೆಲಸ ಚೆನ್ನಾಗಿ ನಡೆದಿದೆ. ಅದನ್ನು ತೆಗೆದು ರಾಜಕೀಯಕ್ಕೋಸ್ಕರ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ ಡೆವೆಲಪ್ಮೆಂಟ್ ಕಾರ್ಪೊರೇಷನ್ನಿಗೆ ಕೊಟ್ಟಿದ್ದೀರಿ. ಕೆಲಸ ಎಷ್ಟಾಗಿದೆ ಸ್ವಾಮಿ? ಏನೂ ಆಗಿಲ್ಲ, ಶೂನ್ಯ. ಆಗ್ರೋದವರ ಕೈಯಲ್ಲಿ ಅವರು ಮಾಡಿಸುವುದು ಆಗ್ರೋದವರು ನಮ್ಮ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಜಿಲ್ಲಾ ಪರಿಷತ್ತಿನವರು ಮಾಡುವಾಗ ಒಂದು ಕಂಡೀಷನ್ ಹಾಕಿದ್ದರು. ನೋ ವಾಟರ್ ನೋ ಪೇಮೆಂಟ್ ಎಂದು. ಈಗ ಅದೆಲ್ಲಾ ರಿಲಾಕ್ಸ್ ಆಗಿಹೋಯಿತು. ನೀರು ಇರಲಿ, ಇಲ್ಲದೇ ಹೋಗಲಿ, ಬೋರ್ ಹಾಕಿದರೆ ಸಾಕು ಇವತ್ತಿನ ದಿವಸ ದುಡ್ಡು ಕೊಟ್ಟು ಕಳುಹಿಸುತ್ತಿದ್ದಾರೆ. ಇದೆಲ್ಲಾ ಏನು ನಡೆಯುತ್ತಿದೆ? ಇದೇನು ಪಟ್ಟಭದ್ರಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ನೀವು ಮಾಡುವುತ್ತಿದ್ದೀರಾ, ಏನು ಮಾಡುತ್ತಿದ್ದೀರಿ ಎಂದು ನನಗಂತೂ ಅರ್ಥವಾಗುವುದಿಲ್ಲ. ದಯಮಾಡಿ ಮುಖ್ಯಮಂತ್ರಿಗಳಾಗಲೀ, ಸಂಬಂಧಪಟ್ಟ ಮಂತ್ರಿಗಳಾಗಲೀ ಇವರನ್ನು ಕರೆಸಿ ಮಾತನಾಡಲಿ. ಡಿಪಾರ್ಟ್‌ಮೆಂಟ್‌ನಲ್ಲಿ ಪ್ರೋಗ್ರೆಸ್ ಏನಾಗಿದೆ ಎಂದು ನೋಡಿ ಇದರ ಬಗ್ಗೆ ಕಾಳಜಿ ವಹಿಸದೇ ಇದ್ದರೆ ಸರ್ಕಾರ ಇದ್ದರೇನು, ಸತ್ತರೇನು ಸ್ವಾಮಿ? ಇನ್ನು ಯಾರಿಗೆ ಬೇಕಾಗಿದೆ? ಸರ್ಕಾರ ಇದ್ದರೂ ಒಂದೇ ಹೋದರೂ ಒಂದೇ. ರೈತರಿಗೆ ಏನೂ ಉಪಯೋಗವಾಗುತ್ತ ಇಲ್ಲ.

ಅಧ್ಯಕ್ಷರು : ಸರ್ಕಾರ ಸಾಯುವುದೇ ಇಲ್ಲ, ಅದು ಚಿರಂಜೀವಿ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಅದನ್ನು ಒಪ್ಪುತ್ತೇನೆ. ಇನ್ನು ಆಹಾರ ವಿತರಣೆಯನ್ನು ಜಿಲ್ಲಾಪರಿಷತ್ತಿನಿಂದ ಕಿತ್ತುಕೊಂಡಿದ್ದೀರಿ. ಹುಬ್ಬಳ್ಳಿ-ಧಾರವಾಡದಲ್ಲಿ ಕೆಲವು ದಿವಸಗಳ ಹಿಂದೆ ಮಾನ್ಯ ಆಹಾರ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆಹಾರ ವಿತರಣೆ ಸರಿಯಾಗಿ ಆಗುತ್ತಾ ಇಲ್ಲ ಒಂದು ತಮಗೆ ದೂರು ಬಂದಾಗ, ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಜಿಲ್ಲಾ ಪರಿಷತ್ತಿನಿಂದ ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ. ದುರಾದೃಷ್ಟ, ನಿಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎಂದು ನಿಮಗೇ ಗೊತ್ತಿಲ್ಲ. ಈಗಾಗಲೇ ಅದನ್ನು ವಾಪಸ್ಸು ತೆಗೆದುಕೊಂಡು ಒಂದು ವರ್ಷವಾಯಿತು. ಜಿಲ್ಲಾಪರಿಷತ್ತಿನಿಂದ ವಾಪಸ್ಸು ತೆಗೆದುಕೊಂಡ ಮೇಲೆಯೇ ಈ ಅನಾಹುತಗಳು ಆಗುತ್ತಾ ಇರುವುದು. ಜಿಲ್ಲಾ ಪರಿಷತ್ತಿನಿಂದ

ಕಿತ್ತುಕೊಂಡು ಸರ್ಕಾರ ಇವತ್ತು ಆಹಾರವನ್ನು ಸರ್ಕಾರ ನೇರವಾಗಿ ಹಂಚುತ್ತಿದೆಯಲ್ಲ ಅದರ ಬಗ್ಗೆ ಕಂಪ್ಲೆಂಟ್ ಬಂದರೆ, ತಾವು ಜಿಲ್ಲಾಪರಿಷತ್ತಿನಿಂದ ವಾಪಸ್ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೀರಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾನು ಆ ರೀತಿ ಹೇಳಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಎಲ್ಲ ಓದಿ ಗುರುತು ಹಾಕಿಕೊಂಡು ಬಂದಿದ್ದೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಆ ರೀತಿ ಹೇಳುವಷ್ಟು ಅಜ್ಞಾನಿ ನಾನಲ್ಲ. ಏನಿದೆ ಎಂದು ಓದಿ ಪತ್ರಿಕೆಯಲ್ಲಿ ಏನು ಬಂದಿದೆ ಎಂದು ದಯವಿಟ್ಟು ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಜಿಲ್ಲಾಪರಿಷತ್ತಿನಿಂದ ಆಹಾರ ಹಂಚಿಕೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾನು ಆ ರೀತಿ ಹೇಳಿಲ್ಲ. ಆ ರೀತಿ ಹೇಳಿಕೆ ಯಾವ ಪತ್ರಿಕೆಯಲ್ಲಿ ಬಂದಿದೆಯೋ ಅದು ನನಗೆ ಗೊತ್ತಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಸರಿ. ನಾನು ಇನ್ನು ಟ್ರಾನ್ಸ್‌ಫರ್ಸ್ ಬಗ್ಗೆ ಹೇಳುತ್ತೇನೆ. ವರ್ಗಾವಣೆಯಲ್ಲಿ ಹಣ ತೆಗೆದುಕೊಂಡಿದ್ದೀರೆಂದು ನಾನು ಚಾರ್ಜ್ ಮಾಡುವುದಕ್ಕೆ ಹೋಗುವುದಿಲ್ಲ. ಹಿರಿಯ ಮುಖಂಡರು ಇದರ ಬಗ್ಗೆ ಎಲ್ಲಾ ಹೇಳಿದ್ದಾರೆ. ನಿನ್ನೆ ಒಂದು ವಿಚಾರ ಬಂದಾಗ, ಜನ ಮಾತನಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ಹೋಗಬೇಡಿ, ನೀವೇ ಏನಾದರೂ ಇದ್ದರೆ ಹೇಳಿ ಎಂದು ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು. ವರ್ಗಾವಣೆ ಬಗ್ಗೆ ಹಣವನ್ನು ಕೊಟ್ಟದ್ದನ್ನು ಅಥವಾ ತೆಗೆದುಕೊಂಡದ್ದನ್ನು ನಾನು ನೋಡಿಲ್ಲ. ಆದರೆ ಇಷ್ಟು ಮಾತ್ರ ನಿಜ ಯಾವ ಅಧಿಕಾರಿಯನ್ನೇ ಕೇಳಲಿ, ನಾವೆಲ್ಲ ಖರ್ಚು ಮಾಡಿ ಬಂದಿದ್ದೇವೆಂದು ಹೇಳುತ್ತಾರೆ. ಆದರೆ ಒಂದು ಪ್ರಶ್ನೆ ನಾನು ಹೇಳುತ್ತೇನೆ. ನಮ್ಮ ರೆವಿನ್ಯೂ ಮಂತ್ರಿಗಳು ಇಲ್ಲೇ ಇದ್ದಾರೆ. ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಯಾವ ಛಾರ್ಜ್ ಮೇಲೆ ವರ್ಗಾವಣೆ ಮಾಡಿದಿರಿ? ಗೌರ್ನಮೆಂಟ್ ಅಡ್ಮಿನಿಸ್ಟ್ರೇಷನ್ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ವರ್ಗಾವಣೆ ಮಾಡಲು ಛಾರ್ಜಸ್ ಏನಾದರೂ ಇತ್ತೇ? ಆ ಜಿಲ್ಲಾಧಿಕಾರಿಗಳು ಒಂದು ಜಡ್ಜ್‌ಮೆಂಟ್‌ನ್ನು ಕೊಟ್ಟರು. ಆ ಒಂದು ತೀರ್ಪಿನಿಂದ ಅವರಿಗೆ ವರ್ಗಾವಣೆ ಆಯಿತು. ಗೌರೀಬಿದನೂರಿನ ಮುನಿಸಿಪಲ್ ಪ್ರೆಸಿಡೆಂಟರು ಸುಮಾರು 30 ಎಕರೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಅದರ ಏಲಿನಿಯೇಷನ್ ಕೇಳಿದರು. ಆಗ ಎಲ್ಲವೂ ಈಚೆಗೆ ಬಂತು. ಈ ಜಮೀನು ಸರ್ಕಾರದ್ದು, ಇದು ಕೆರೆ ಅಂಗಳಕ್ಕೆ ಸೇರಿದ್ದು, ನೀವು ಕೇಳುವುದಕ್ಕೆ ಅಧಿಕಾರ ಇಲ್ಲ, ಒತ್ತುವರಿ ಮಾಡುವುದಕ್ಕೆ ಆಗುವುದಿಲ್ಲ. ಜೊತೆಗೆ ನೀವು ಏನು ಸಿವಿಲ್ ಕೋರ್ಟ್‌ನಲ್ಲಿ ಡಿಕ್ರಿ ತೆಗೆದುಕೊಂಡಿದ್ದೀರಿ ಅದು ಸರ್ಕಾರವನ್ನು ಪಾರ್ಟಿ ಮಾಡದೇ ತೆಗೆದುಕೊಂಡಿದ್ದಾರೆ, ಇದು ಇರ್ರೆಗ್ಯುಲರ್ ಇದೆ, ಯಾರು ಯಾರು ಮ್ಯುಟೇಷನ್ ಎಂಟ್ರೀಸ್ ಛೇಂಜ್ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಒಂದು 18.1.91ರಲ್ಲಿ ಜಡ್ಜ್‌ಮೆಂಟ್ ಕೊಟ್ಟರು. ಕೇಸ್ ನಂಬರ್ ಆರ್‌ಆರ್‌ಟಿಸಿಆರ್ 310 : 90-01. ಅದು ಈ ರೀತಿ ಇದೆ : "On the basis of my observation made above, the mutation entries made in pursuance of Civil Court Decree in 1956 in favour of Sri Esturi Sampangi Ramaiah and also the subsequent mutation entries accepted by the then Revenue Inspector and the Village Accountant in favour of Sri Esturi Subbaiah Setty S/o Esturi Sampangi Ramaiah - No. 120/80-81 dated 6/8/81 are set aside and the entire land in question is reserved for the

purpose of public use under Section 71 of Karnataka Land Revenue Act, 1964. Further, the Assistant Commissioner, Chikkaballapur is directed to take disciplinary action under CCA rules against the concerned Revenue Inspectors and Village Accountants, who are responsible for these illegal entries".

ಈ ಆರ್ಡರ್ ಆದ ಸುಮಾರು 15 ದಿವಸ, ಒಂದು ತಿಂಗಳೊಳಗೆ ಇದಕ್ಕೆ ಇಂಟರೆಸ್ಟೆಡ್ ಪಾರ್ಟಿಸ್ ಲೋಕಸಭಾ ಸದಸ್ಯರು ಹಾಗೂ ಶಾಸಕರು ಯಾರಿದ್ದಾರೆ ಅವರು ಪ್ರಭಾವ ತಂದು ಅವರನ್ನು ವರ್ಗಾವಣೆ ಮಾಡಿಸಿದರು. ಇದು ಯಾವ ಧರ್ಮ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಆ ವಿಚಾರ ಅಷ್ಟಕ್ಕೇ ನಿಲ್ಲಲಿಲ್ಲ. ಅವರನ್ನು ವಿದ್ಯಾ ಇಲಾಖೆಯಲ್ಲಿ ಉಪಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದರು. ಆ ನಂತರ 2 ಅಥವಾ 3 ತಿಂಗಳ ಒಳಗೇ ಪುನಃ ಅಲ್ಲಿಂದ ಸಿಫ್ಟ್ ಮಾಡಿದರು. ಯಾರು ಸರ್ಕಾರದ ಆಸ್ತಿಯನ್ನು ಉಳಿಸಬೇಕು, ಸರ್ಕಾರಕ್ಕೆ ಗೌರವ ಘನತೆ ತರುವ ರೀತಿಯಲ್ಲಿ ಕೆಲಸ ಮಾಡಬೇಕು ಮತ್ತು ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕೆನ್ನುವ ಅಧಿಕಾರಿಗಳು ಯೂರು ಸಿಗುತ್ತಾರೆ, ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು ಹಾಕಿದರು. ಎನ್ನುವಂತೆ, ಇಂತಹ ಅಧಿಕಾರಿಗಳ ಮೇಲೆ ಕಲ್ಲು ಬೀರತಕ್ಕದ್ದೇ ಈ ಸರ್ಕಾರದ ಕೆಲಸ.

10.15 ಎ.ಎಂ.

ಯಾರು ನಿಷ್ಪೃಹತೆಯಿಂದ ಮತ್ತು ದಕ್ಷತೆಯಿಂದ ಕೆಲಸಮಾಡತಕ್ಕ ಅಧಿಕಾರಿಗಳಿಗೆ ಇಲ್ಲಿ ಅವಕಾಶವಿಲ್ಲ, ಒಳ್ಳೆಯ ಅಧಿಕಾರಿಗಳನ್ನು ಮೂರು ಮೂರು ತಿಂಗಳಿಗೆ, ಮೂರು ಮೂರು ದಿವಸಗಳಿಗೆ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಚೆಂಡು ಒದ್ದಹಾಗೆ ಒದೆಯುತ್ತಿದ್ದಾರೆ. ಅದಕ್ಕೆ ಇದು ಒಂದೇ ಒಂದು ಉದಾಹರಣೆ ಮಾನ್ಯ ಜಾಲಪ್ಪನವರು ಒಳ್ಳೆಯ ಉದಾಹರಣೆಯನ್ನು ಹೇಳುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಮತೀಯ ಗಲಭೆಗಳು ನಡೆಯದಂತಹ ಸಂದರ್ಭದಲ್ಲಿ ಬಹಿರಂಗವಾಗಿ ಈ ಅಧಿಕಾರಿ ದಕ್ಷತೆಯಿಂದ ಕೆಲಸ ಮಾಡಿದ್ದಾರೆಂದು ಹೇಳಿದ್ದಾರೆ. ಈ ಸದನದಲ್ಲಿ ಕೂಡ ಅದೇ ಮಾತನ್ನು ಹೇಳಿದ್ದಾರೆ. ಇದು ನಾನು ಹೇಳತಕ್ಕ ಮಾತಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತಹ ಮಾತು. ಇಂತಹ ಅಧಿಕಾರಿಗಳನ್ನು ದಕ್ಷತೆಯಿಂದ ಕೆಲಸ ಮಾಡಿದ್ದಕ್ಕೋಸ್ಕರ ಕೋಟ್ಯಾಂತರ ರೂಪಾಯಿ ಆಸ್ತಿ ಪರರ ಪಾಲಾಗುವುದನ್ನು ತಪ್ಪಿಸಿದ್ದಕ್ಕೋಸ್ಕರ ಆ ಅಧಿಕಾಯನ್ನು ಮೂರು ಮೂರು ತಿಂಗಳಿಗೊಂದು ಸಾರಿ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಚೆಂಡು ಒದ್ದಹಾಗೆ ಒದೆಯುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಂತಹ ನೂರಾರು ಉದಾಹರಣೆಗಳು ಇವೆ. ವಿಧಾನಸೌಧದ ಮೂರನೆ ಮಹಡಿಯಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೆ ಅವಕಾಶವಿಲ್ಲ. ನೀರು ಯಾವುದನ್ನು ಹೇಳಲಿಕ್ಕೆ ಹೊರಟಿದ್ದೀರಿ?

ಶ್ರೀ ಸಿ. ಬೈರೇಗೌಡ : ದಕ್ಷತೆಯಿಂದ ಕೆಲಸ ಮಾಡಿದವರಿಗೆ ಇವರು ಕೊಟ್ಟಿರತಕ್ಕ ಉಡುಗೊರೆ, ಇದು ಜ್ವಲಂತ ಉದಾಹರಣೆ. ಇದು ನಾಚಿಕೆಯಾಗಬೇಕಾಗಿರತಕ್ಕಂಥಾದ್ದು. ಆದರೆ ಏನು ಮಾಡೋಣ. ನಾಚಿಕೆಯಿಲ್ಲ, ಎಂಥದೂ ಇಲ್ಲ ಇಲ್ಲಿ ಬಂದು ಕುಳಿತುಕೊಂಡಿರುತ್ತಾರೆ.

ಶ್ರೀ ಆರ್.ಎಲ್. ಜಾಲಪ್ಪ : ಈ ತರಹ ಒಳ್ಳೊಳ್ಳೆಯ ಅಧಿಕಾರಿಗಳ ಮೇಲೆ ತಾವು ಕ್ರಮ ತೆಗೆದುಕೊಳ್ಳುವುದಾದರೆ, ಕಡೆಗೆ ನಿಮ್ಮ ಹತ್ತಿರ ಉಳಿಯುವ ಅಧಿಕಾರಿಗಳು ಯಾರು ಎಂದು ಯೋಚನೆ ಮಾಡಿ. ಇದರಿಂದ ಅಡ್ಮಿನಿಸ್ಟ್ರೇಷನ್ ಮೇಲೆ ಏನು

ಪರಿಣಾಮವಾಗುತ್ತದೆ, ಇದರಿಂದ ನಿಮಗೆ ಒಳ್ಳೆಯ ಹೆಸರು ಬರುತ್ತದೆಯೇ ಎಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಿ. ಇದರ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಸಣ್ಣ ವಿಷಯ, ನನ್ನ ತಾಲ್ಲೂಕಿಗೆ ಸಂಬಂಧಪಟ್ಟಿದ್ದು ಅದನ್ನು ಹೇಳಬಾರದು. ಆದರೂ ಹೇಳಬೇಕಾಗುತ್ತದೆ. ನನ್ನ ತಾಲ್ಲೂಕಿನ ಒಬ್ಬ ತಹಶೀಲ್ದಾರ್, ನಾನು ಇಂತಹವರು ಬೇಕೆಂದು ಯಾರನ್ನು ಕೇಳಿರಲಿಲ್ಲ. ಅವರೇ ಯಾರೋ ಒಬ್ಬರನ್ನು ಅಲ್ಲಿಗೆ ಹಾಕಿದ್ದರು. ಆ ಪುಣ್ಯಾತ್ಮ ಅಲ್ಲಿಗೆ ಬಂದು ಆರು ತಿಂಗಳು ಇದ್ದ ಚುನಾವಣೆಯ ಕಾಲದಲ್ಲ ಆತ ಅಲ್ಲಿದ್ದ. ಆ ಆರು ತಿಂಗಳು ಕಾಲದಲ್ಲಿ ನಾನು ಆತನನ್ನು ಎರಡು ಸಾರಿ ನೋಡಿದ್ದೆ. ನಾನು ಯಾವುದೋ ಒಂದು ಜಮೀನಿನ ತಕರಾರಿನಲ್ಲಿ ಅದಕ್ಕೋಸ್ಕರ ಆತನನ್ನು ಎರಡು ಸಾರಿ ನೋಡಿದ್ದೇನೆ. ಚುನಾವಣೆ ಪ್ರಾರಂಭವಾದ ಮೇಲೆ ನಾನು ಅಧಿಕಾರಿಗಳನ್ನು ನೋಡುವ ಪರಿಪಾಠವನ್ನು ಇಟ್ಟುಕೊಂಡಿಲ್ಲ. ನಾನು ರಾಮೇಗೌಡರ ಕಾಲದಿಂದಲೂ ಅದನ್ನು ಅನುಸರಿಸಿಕೊಂಡು ಬಂದಿದ್ದೇನೆ. ಆರು ತಿಂಗಳು ಆದ ತಕ್ಷಣ ಆತನನ್ನು ರಿಲೀವ್ ಮಾಡಿದರು. ಬೇರೆಯವರ ಕೈಗೆ ಆರ್ಡರ್ ಕೊಟ್ಟು ಅವನನ್ನು ಕಳಿಸಿ ಇವರನ್ನು ರಿಲೀವ್ ಮಾಡಿಸಿದರು. ಆಗ ನಾನು ಮಾನ್ಯ ಖರ್ಗೆಯವರಿಗೆ ಫೋನ್ ಮಾಡಿ ಕೇಳಿದೆ. ಪಾಪ ಅವರು ಹೇಳಿದರು ಅವರ ಅಣ್ಣ ಕಾಂಗ್ರೆಸ್ ವಿರುದ್ಧವಾಗಿ ಗೌರಿಬಿದನೂರು ತಾಲ್ಲೂಕಿನಲ್ಲಿ ಕೆಲಸ ಮಾಡಿದ್ದಾನೆ. ಅದಕ್ಕೋಸ್ಕರ ದೊಡ್ಡ ಬಳ್ಳಾಪುರದಲ್ಲಿ ತಹಶೀಲ್ದಾರರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಬಂದು ಪಟ್ಟುಹಿಡಿದರು, ಅದಕ್ಕೆ ನಾನು ಟ್ರಾನ್ಸ್‌ಫರ್ ಮಾಡಿದ್ದೇನೆಂದು ಹೇಳಿದರು. ಇದು ಯಾವ ಧರ್ಮ ಅವರ ಅಣ್ಣ ಗೌರಿಬಿದನೂರು ತಾಲ್ಲೂಕಿನಲ್ಲಿ ಕಾಂಗ್ರೆಸ್ ವಿರುದ್ಧ ಕೆಲಸ ಮಾಡಿದ್ದು ನಿಜ. ಗೌರಿಬಿದನೂರು ತಾಲ್ಲೂಕಿಗೂ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿಗೂ ಏನು ಸ್ವಾಮಿ ಸಂಬಂಧ? ದೊಡ್ಡಬಳ್ಳಾಪುರ ತಾಲ್ಲೂಕಿನ ತಹಶೀಲ್ದಾರ್ ಏನು ಮಾಡಿದ್ದಾನೆ? ಇಷ್ಟು ವಿನ್‌ಡಿಕ್ಟೀವ್ ಆಗಿ ಇರಬೇಡಿ. ನಾವು ನೋಡಿದ್ದೇವೆ, ಈಗಲ್ಲ ಹಿಂದೆ ವೀರೇಂದ್ರ ಪಾಟೀಲರು ಚೀಫ್ ಮಿನಿಸ್ಟರ್ ಆಗಿದ್ದಾಗ, ಹಿಂದೆ ಯಾರೂ ಕೂಡ ಇಷ್ಟು ವಿನ್‌ಡಿಕ್ಟೀವ್ ಆಗಿ ಕೆಲಸ ಮಾಡಿಲ್ಲ. ಆಗ ರಾಮೇಗೌಡರು ದೊಡ್ಡಬಳ್ಳಾಪುರದ ಎಂಎಲ್‌ಎ ಆಗಿದ್ದರು. ಆಗ ನಾವು ವಿರೋಧಪಕ್ಷದಲ್ಲಿದ್ದೆವು. ಸ್ವತಂತ್ರವಾಗಿ ಎರಡು ಸಾರಿ ರಾಮೇಗೌಡರು ಗೆದ್ದು ಬಂದಿದ್ದರು. ಯಾರೂ ಕೂಡ ಇಷ್ಟು ವಿನ್‌ಡಿಕ್ಟೀವ್ ಆಗಿ ಇರಲಿಲ್ಲ. ಹಿಂದೆ ವೀರೇಂದ್ರ ಪಾಟೀಲರು ಇದ್ದರು. ಆಮೇಲೆ ಶ್ರೀಮಾನ್ ದೇವರಾಜ್ ಅರಸ್‌ರವರು ಬಂದರು. ದೇವರಾಜ್ ಅರಸ್‌ರವರು ಬಂದ ಎರಡು-ಮೂರು ವರ್ಷಗಳಲ್ಲಿ ಕಾಂಗ್ರೆಸ್ಸು ನಾವ್ಯಾರೂ ಸೇರಲಿಲ್ಲ. ಆಮೇಲೆ ಕಾಂಗ್ರೆಸ್‌ಗೆ ಸೇರಿದ್ದೇನೆ. ದಯವಿಟ್ಟು ಇಷ್ಟು ವಿನ್‌ಡಿಕ್ಟೀವ್ ಆಗಿ ಇರಬೇಡಿ ಎಂದು ಹೇಳುತ್ತಿದ್ದೇನೆ. ಇವೆಲ್ಲ ಸಣ್ಣ ವಿಷಯಗಳು, ನಿಜ.

ಶ್ರೀ ಕೆ. ಶಿವಮೂರ್ತಿ : ಇದೆಲ್ಲ ಸಣ್ಣ ವಿಷಯವೇ? ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ದಯವಿಟ್ಟು ಕ್ಷಮಿಸಬೇಕು. What does he mean by that?

(ಗೊಂದಲ)

SRI K. SHIVAMURTHY : You have also made transfers and posted officers to key posts to the officers belonging to Scheduled Castes and Scheduled Tribes & Backwards Classes and Minorities. Let us discuss everything. ನೀವು ಅಲೆಗ್ಸಾಂಡರ್ ಬಗ್ಗೆ ಮಾತನಾಡುತ್ತಾ ಇದ್ದೀರಿ, ಹಿಂದಿನದೂ ಮಾತನಾಡಿ. ಅವಿಶ್ವಾಸ ನಿರ್ಣಯದ ಮೇಲೆ ಎಲ್ಲವನ್ನೂ ಮಾತನಾಡಿ. ಬರೀ ಒಂದೇ ಸೈಡ್‌ನಲ್ಲಿ ಮಾತನಾಡಿ, ಒಂದೇ ರೀತಿಯಲ್ಲಿ ಹೋಗತಕ್ಕದ್ದು ಸರಿಯಲ್ಲ. ಐಎಎಸ್

ಲಾಬಿಯಲ್ಲಿ ಏನು ನಡೆಯುತ್ತಿದೆ ಸ್ವಾಮಿ? ಅದು ನಿಮಗೆ ಗೊತ್ತಿದೆಯೆ? ಅದು ನನಗೆ ಗೊತ್ತು. ಎಸ್‌ಸಿ-ಎಸ್‌ಟಿ ಮೈನಾರಿಟಿ ಆಫೀಸರ್ ಒಂದು ಕಡೆ ಇದ್ದಾರೆ....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳನ್ನು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ. ಮಾನ್ಯ ಶಿವಮೂರ್ತಿಯವರು ಬಹಳ ಅನುಭವಿ ಶಾಸಕರು. ಬಹಳ ಅನುಭವಿ ಮಂತ್ರಿಗಳು. ಆಡಳಿತ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದಾರೆ. ಸುಧೀರ್ಘವಾಗಿ ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ, ಅವರಿಗೆ ಅನುಭವವಿದೆ. ಜೊತೆಗೆ ಇವರೊಬ್ಬರೇ ಹಿಂದುಳಿದ ವರ್ಗದವರ ಬಗ್ಗೆ ಕಾಳಜಿ ಇರತಕ್ಕವರು.

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಅನುಭವ ಅವರಿಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಜೂನಿಯರ್, ಸೀನಿಯರ್ ಪ್ರಶ್ನೆ ಇಲ್ಲಿ ಹೇಳುತ್ತಿಲ್ಲ. ಸದನದ ಸದಸ್ಯರು ನಾವೆಲ್ಲರೂ ಒಂದೇ. ಆದರೆ ಅವರು ಅನುಭವದಿಂದ ಆ ಮಾತನ್ನು ಹೇಳುತ್ತಿದ್ದಾರೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಆಕ್ಷೇಪಣೆ ಇಷ್ಟೇನೆ. ಈಗ ಮಾನ್ಯ ಸಭಾನಾಯಕರು ಇದ್ದಾರೆ. ಅವಿಶ್ವಾಸ ನಿರ್ಣಯದ ಬಗ್ಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅವರ ನೀತಿ, ನಾವು ಹಿಂದುಳಿದ ವರ್ಗದವರಿಗೆ, ಅಲ್ಪ ಸಂಖ್ಯಾತರಿಗೆ, ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ವರ್ಗದವರಿಗೆ ಇಂತಿಂಥ ಜಾಗದಲ್ಲಿ ಇಷ್ಟಿಷ್ಟು ಕೊಟ್ಟುಕೊಂಡು ಬಂದಿದ್ದೇವೆ, ಇದೆಲ್ಲ ಮಾಡಿದ್ದೇವೆ, ವೆಂಕಟಸ್ವಾಮಿ ಆಯೋಗದ ವರದಿಯನ್ನು ಜಾರಿಗೆ ತರುತ್ತೇವೆ ಎಂದು ಘೋಷಣೆ ಮಾಡುವುದಕ್ಕೆ ತಮಗೆ ಅವಕಾಶ ಇದೆ. ನಾನು ಯಾವುದಕ್ಕೆ ಇವತ್ತು ಪ್ರತಿಭಟನೆ ಮಾಡುತ್ತಿದ್ದೇನೆ ಎಂದರೆ, ಮಾನ್ಯ ಜಾಲಪ್ಪನವರು ಹಿರಿಯ ಸದಸ್ಯರು ಇದ್ದಾರೆ. ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ, ಅವರು ಮಾತನಾಡಿದ್ದಾದರು ಏನಿದೆ? ಅವರು ನಿಮಗೆ ಸಲಹೆಗಳನ್ನು ಕೊಡುತ್ತಿದ್ದಾರೆ. ಹೀಗೆ ಸರ್ಕಾರ ದಾರಿತಪ್ಪುತ್ತಿದೆ, ನಿಮಗೆ ಕೆಟ್ಟ ಹೆಸರು ಬರುತ್ತಿದೆ ನಿಮಗೆ ಗೊತ್ತಿದೆಯೋ ಇಲ್ಲವೋ ಎಂದು ಅವರು ತಮ್ಮ ಜವಾಬ್ದಾರಿ ನಿರ್ವಹಣೆ ಮಾಡುವಾಗ, ನೀವು ಮೂರು ದಿವಸಗಳಿಂದ ಬಡ್ಕೊಳ್ತಾ ಇದ್ದೀರಿ ಎಂದು ಹೇಳಿದರೆ ನಾವೇನು ಬಡ್ಕೊಳ್ತಿದ್ದೀವಿ ಸ್ವಾಮಿ? ಹಾಗಾದರೆ ನಾರು ಇಲ್ಲಿ ವಿರೋಧಪಕ್ಷವಾಗಿ ಇದ್ದುಕೊಂಡು ಏತಕ್ಕೆ ಕುಳಿತುಕೊಳ್ಳಬೇಕು? ಹಾಗಾದರೆ ನೀವೇ ಸಭೆ ಮಾಡಿಕೊಳ್ಳಿ. ನಾರು ಏನೂ ಹೇಳ್ಲಿಲ್ಲ, ಒಬ್ಬ ತಹಸೀಲ್ದಾರರ ಟ್ರಾನ್ಸ್‌ಫರ್ ಆಗಿದೆ, ಅವರ ಅಣ್ಣ ಅಲ್ಲಿ ಕೆಲಸ ಮಾಡಿದೆ ಎಂದು ಈ ತರಹ ಮಾಡಿದ್ದಾರೆ, ನೀವು ಇಂಡಿಕ್ಟೀವ್ ಆಗಿ ಹೋಗಬೇಡಿ ಎಂದು ಹೇಳಿದರೆ, ಇಲ್ಲ ನಾವು ಇಂಡಿಕ್ಟೀವ್ ಆಗಿ ಹೋಗುವುದೇ ನಮ್ಮ ತತ್ವ ಎಂದು ಹೇಳಿ ಆದ್ದರಿಂದ ನೀವು ಬಡ್ಕೊಳ್ತಿದ್ದೀರಿ. ಎನ್ನುವ ಪದ ಉಪಯೋಗಿಸಿದರೆ ಹೇಗೆ? ಅದೂ ಶ್ರೀ ಜಾಲಪ್ಪನವರು ಮಾತನಾಡುವಾಗ ಹೀಗೆ ಹೇಳಿದರೆ ಹೇಗೆ? ಅವರು ಏನು ಬಡ್ಕೊಳ್ತಿದ್ದಾರೆ? ಅದನ್ನು ತಾವು ಸ್ವಲ್ಪ ವಿಶ್ಲೇಷಣೆ ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ಎಷ್ಟು ಬಡ್ಕೊಂಡರೂ ವಾಪಸ್ಸು ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಶ್ರೀ ಜಾಲಪ್ಪನವರೇನು ಮಾತನಾಡುತ್ತಿದ್ದರು, ಅದು ಸರಿಯಿಲ್ಲ ಎನ್ನತಕ್ಕಂಥ ಅಧಿಕಾರ ಅವರಿಗೆ ಇದೆ, ಮಾತನಾಡಲಿ. ಆದರೆ ಮೂರು ದಿವಸಗಳಿಂತ ನೀರು ಬಡ್ಕೊಳ್ತಿದ್ದೀರಿ ಎಂದರೆ ನಾವೆಲ್ಲ ಯಾರ್‍ಯಾರು ಮಾತನಾಡಿದ್ದೇವೆ, ವಿರೋಧ ಪಕ್ಷದ ನಾಯಕರಿಂದ ಹಿಡಿದು, ಈ ಕಡೆಯಿಂದ ಮಾತನಾಡಿದ್ದೇವೆ, ನಾವೆಲ್ಲರೂ ಬಡ್ಕೊಂಡಿರೋದಾ? ಮಾನ್ಯ ಮುಖ್ಯಮಂತ್ರಿಗಳು

ನಗುತ್ತಿದ್ದಾರೆ, ಅವರು ಸ್ವಲ್ಪ ಕೇಳಬೇಕು. ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಿ. ಈಗ ಶಿವಮೂರ್ತಿಯವರು ನಿನ್ನೆಯಾದರೂ ಮಾತನಾಡಬಹುದಿತ್ತು, ಮೊನ್ನೆ ಮಾತನಾಡಬಹುದಿತ್ತು. ಇವತ್ತು ಇದ್ದಕ್ಕಿದ್ದಂತೆ ಅವರಿಗೆ ಆವೇಶ, ಉತ್ಸಾಹ, ಏನೋ ಒಂದು ರೀತಿ ಮೈಮೇಲೆ ದೇವರು ಬಂದಹಾಗೆ ಆಡಿದರಲ್ಲ, ಅದಕ್ಕೆ ಕಾರಣ ಏನೆಂದು ನಮಗೆ ಅರ್ಥವಾಗಲಿಲ್ಲ. ಸಾಮಾನ್ಯವಾಗಿ ಅವರ ಬಗ್ಗೆ ನನಗೆ ಒಂದು ತರಹ ಸ್ನೇಹ, ವಿಶ್ವಾಸ ಇದೆ. ಅವರು ಏಕೆ ಈ ತರಹ ದಾರಿ ತಪ್ಪಿದರೋ.......

ಅಧ್ಯಕ್ಷರು: ನಿಮಗೆ ಯಾರನ್ನು ಕಂಡರೆ ದ್ವೇಷ ಇದೆ, ಅದನ್ನು ಮೊದಲು ಹೇಳಿ.

(ನಗು)

ಶ್ರೀ ವಾಟಾಳ್ ನಾಗರಾಜ್: ನಾನು ಒಂದು ರೀತಿ ಅಜಾತಶತ್ರು ಇದ್ದಹಾಗೆ. ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ...

ಅಧ್ಯಕ್ಷರು: ನೀವು ಯಾರು ಎದ್ದುನಿಂತರೂ ಅವರನ್ನು ಕಂಡರೆ ಬಹಳ ಗೌರವ ಇದೆ, ಬಹಳ ವಿಶ್ವಾಸ ಇದೆ ಎಂದು ಹೇಳುತ್ತೀರಿ. ನನ್ನ ಒಂದು ರೆಕಾರ್ಡ್‌ಗೆ ಕೇಳುತ್ತೇನೆ. ಯಾರನ್ನಾದರೂ ಕಂಡರೆ ನಿಮಗೆ ದ್ವೇಷ ಇದೆಯೇ?

ಶ್ರೀ ವಾಟಾಳ್ ನಾಗರಾಜ್: ಇಲ್ಲ, ಯಾರ ಬಗ್ಗೆಯೂ ದ್ವೇಷ ಮಾಡಿದವನಲ್ಲ ನಾನು. ಅವರೇನು ಈ ಪದವನ್ನು.....

ಅಧ್ಯಕ್ಷರು: ಆಗಲಿ ಬಿಡಿ 'ಬಡ್ಕೊಂಡರು'ಎನ್ನುವ ಪದ ಬಳಸಿದ್ದೀರಲ್ಲ, ಅದನ್ನು ಉದ್ದೇಶಪೂರ್ವಕವಾಗಿ ಹೇಳಿಲ್ಲ, ಅಲ್ವಾ ಶಿವಮೂರ್ತಿಯವರೇ? ಅದನ್ನು ವಾಪಾಸ್ಸು ತೆಗೆದುಕೊಳ್ಳಿ ನೀವು.

ಶ್ರೀ ಕೆ. ಶಿವಮೂರ್ತಿ : ಈ ಸದನದಲ್ಲಿ ಆವೇಶಪೂರಿತವಾಗಿ ಮಾತನಾಡತಕ್ಕದ್ದು ಸಲ್ಲದು. ನಾನು ಒಪ್ಪುತ್ತೇನೆ.

MR. SPEAKER: Thank you.

ಶ್ರೀ ಕೆ. ಶಿವಮೂರ್ತಿ: ಒಂದೊಂದು ಸಲ ಮಾತನಾಡುತ್ತಾ, ಕೇಳುತ್ತಾ, ಕೇಳುತ್ತಾ ಏನು ಆಗುತ್ತದೆ ಎಂದರೆ, ನಮ್ಮಲ್ಲೂ ಪುರಾವೆಗಳು ಇರುತ್ತವೆ, ಹಿಂದೆ ಏನು ಮಾಡಿದ್ದಾರೆ, ಯಾವರೀತಿ ಅವರು ಪಡ್ಕೊಂಡಿದ್ದಾರೆ, ಅವರು ಏನೇನು ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದು ನಮ್ಮ ಹತ್ತಿರ ಇರುತ್ತದೆ. ಅದನ್ನು ನೋಡತಕ್ಕದ್ದಕ್ಕೂ, ಕೇಳತಕ್ಕದ್ದಕ್ಕೂ ಸಹನೆ ಇದೆ. ಆವೇಶದಲ್ಲಿ ಕೆಲವು ಪದಗಳನ್ನು ತಪ್ಪು ಆಡಿದ್ದರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ.

ನಮ್ಮ ವ್ಯವಸ್ಥೆಯಲ್ಲಿ ಅದು ತಪ್ಪೇನೂ ಅಲ್ಲ.

MR. SPEAKER: Thank you.

ಶ್ರೀ ಕೆ. ಶಿವಮೂರ್ತಿ: ಆದರೆ ಸೋಶಿಯಲ್ ಜಸ್ಟೀಸ್ ಕೊಡತಕ್ಕಂಥ ರೀತಿಯಲ್ಲಿ...

ಶ್ರೀ ಸಿ. ಭೈರೇಗೌಡ: ಹಿಂದಿನ ಸರ್ಕಾರ ಇದ್ದಾಗ ಇವರು ಏನು ಮಾಡುತ್ತಿದ್ದರು?

(ಗೊಂದಲ)

ಅಧ್ಯಕ್ಷರು: ಕ್ರಾಸ್ ಎಕ್ಸಾಮಿನೇಶನ್ ಬೇಡ, ಬಿಡಿ.

ಶ್ರೀ ಸಿ. ಭೈರೇಗೌಡ: ಹಿಂದೆ ಅಕ್ರಮ, ಅನ್ಯಾಯ ಆಗಿದ್ದರೆ ಇವರು ಸುಮ್ಮನೆ ಏಕೆ ಕುಳಿತುಕೊಂಡರು? ಅವರ ಹತ್ತಿರ ಏನು ಪುರಾವೆ ಇದೆ, ಅದನ್ನು ಹೇಳಲಿ. ಲೋಕಾಯುಕ್ತದ ಬಗ್ಗೆ ಏನು ಹೇಳುತ್ತೀರೋ ಹೇಳಿ. ನೋಡೋಣ. ಆಮೇಲೆ.....

(ಗೊಂದಲ)

ಅಧ್ಯಕ್ಷರು: ಶ್ರೀ ಜಾಲಪ್ಪನವರು ಹೇಳಿದ ಮಾತುಗಳು ಮಾತ್ರ ಸದನದ ರೆಕಾರ್ಡಿಗೆ ಹೋಗುತ್ತದೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, ಈ ಸದನದ ಎಲ್ಲಾ ಸದಸ್ಯರು ಒಬ್ಬರಿಗೊಬ್ಬರು ಗೌರವವನ್ನು ಇಟ್ಟುಕೊಂಡು ಹೋಗತಕ್ಕ ಸಂದರ್ಭ ಇದೆ. ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಕೆಲವೊಮ್ಮೆ ವಿಷಯವನ್ನು ಹೆಚ್ಚಾಗಿ ಚರ್ಚೆ ಮಾಡತಕ್ಕ ಕಾಲದಲ್ಲಿ ಒತ್ತನ್ನು ಕೊಟ್ಟು ಮಾತನಾಡುವುದು ಸಹಜವಾದುದು.There is nothing wrong in that.ಗೌರವದ ಬಗ್ಗೆ ಅದರಲ್ಲಿಯೂ ಮಾನ್ಯ ಹಿರಿಯ ಸದಸ್ಯರ ಬಗ್ಗೆ ಅತ್ಯಂತ ಗೌರವ ಇಟ್ಟುಕೊಂಡು ಹೋಗತಕ್ಕ ವಿಚಾರ ಇದೆ. ಎಲ್ಲರ ಬಗ್ಗೆಯೂ ಗೌರವ ಇದೆ. ಅದರಲ್ಲೂ ಹಿರಿಯ ಸದಸ್ಯರು ಏನು ಮಾತನಾಡಿದ್ದಾರೆ, ಏನು ಉದ್ದೇಶ ಇಟ್ಟು ಹೇಳುತ್ತಾರೆ ಎನ್ನುವುದನ್ನು ನಾವೂ ಕೂಡ ನೋಡತಕ್ಕ ಸಂದರ್ಭ ಇದೆ. ತಾವು ಭಾಷಣ ಮಾಡಬೇಕಾದರೆ ನಾವು ಕೇಳಬೆಕೆಂದಿಲ್ಲ, ಈ ಕಡೆ ಮಾತನಾಡತಕ್ಕ ಸದಸ್ಯರ ಭಾಷಣವನ್ನು ತಾವೂ ಕೇಳಬೇಕು ಎನ್ನತಕ್ಕ ಪ್ರಶ್ನೆ ಬಂದೇ ಬರುತ್ತದೆ. ಮಾನ್ಯ ಜಾಲಪ್ಪನವರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ, ಮತ್ತೊಬ್ಬರ ಬಗ್ಗೆಯೂ ಗೌರವ ಇದೆ. ತಾವು ದಯಮಾಡಿ ಮಾತನಾಡಿ, ಮಾನ್ಯ ಶಿವಮೂರ್ತಿಯವರು ಏಕೆ ಹೇಳಿದ್ದಾರೆ ಎಂಬುದಕ್ಕೆ ಈಗಾಗಲೇ ಅವರು ಹೇಳಿದ್ದಾರೆ. ನಾನು ಮತ್ತೆ ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ, ತಾವು ತಮ್ಮ ಮಾತನ್ನು ಮುಂದುವರಿಸಿ, ನಾವು ತಮ್ಮ ಮಾತನ್ನು ಕೇಳಬೇಕೆಂಬ ಆಸೆಯಿಂದ ಕುಳಿತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶಿವಮೂರ್ತಿಯವರು ಏನು ಆಡಿದರೋ ಅದರ ಬಗ್ಗೆ ನಾನು ಯೋಚನೆ ಮಾಡುವುದಿಲ್ಲ, ಅದನ್ನು ಇಲ್ಲಿಗೆ ಬಿಡುತ್ತೇನೆ. ಅವರು ಒಂದು ಹೇಳಿದರು, ತಮ್ಮ ಕಾಲದಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ, ಮೈನಾರಿಟೀಸ, ಹರಿಜನರಿಗೆ ಒಳ್ಳೆಯ ಸ್ಥಾನಗಳನ್ನು ಕೊಟ್ಟಿದ್ದೀರಿ ಎಂದು. ಬಹುಶಃ ಅವರಿಗೆ ಜ್ಞಾಪಕ ಇರಬಹುದು ನಾನು ಸಹಕಾರಿ ಮಂತ್ರಿಯಾಗಿದ್ದಾಗ, ಅವರ ಸಧ್ಯ ಮಾವನನ್ನು ಇಲ್ಲಿ ಕರೆದುಕೊಂಡು ಬಂದು ಡೆಪ್ಯೂಟಿ ರಿಜಿಸ್ಟ್ರಾರ್ ಮಾಡಿದೆ. ಅದನ್ನು ಏಕೆ ಹೇಳುತ್ತಿದ್ದೇನೆಂದರೆ, ಬ್ಯಾಕ್‌ವರ್ಡ್ ಕ್ಲಾಸ್‌ಗೆ, ಮೈನಾರಿಟೀಸ್‌ಗೆ, ಎಸ್‌ಸಿ ಎಸ್‌ಟಿಗೆ ಅನುಕೂಲ ಮಾಡಿಕೊಡುವುದು ಯಾರ ಗುತ್ತಿಗೆಯೂ ಅಲ್ಲ. ನಮ್ಮ ಕಾಲದಲ್ಲೂ ಆದಷ್ಟು ಮಾಡಿದ್ದೇವೆ ಎನ್ನುವುದನ್ನು ಅವರಿಗೆ ಎಚ್ಚರಿಸುತ್ತಿದ್ದೇನೆ. ನಾನು ಅವರಿಗೆ ವಿಂಡಿಕ್ಟಾಗಿ ಇರಬೇಡಿ ಎಂದು ಹೇಳಿದೆ. ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನಮ್ಮ ಊರಿನಲ್ಲಿ ಒಂದು ಸೊಸೈಟಿ ಇದೆ, ಇದನ್ನು ಹೇಳಬಾರದು, ನನಗೆ ಅರ್ಥವಾಗುತ್ತದೆ, ಆದರೆ ವಿಧಿ ಇಲ್ಲ, ಹೇಳುತ್ತಿದ್ದೇನೆ. ಈ ಸರ್ಕಾರ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂದರೆ, ಆ ಸೊಸೈಟಿಗೆ ಫೈನಾನ್ಸ್ ಮಾಡುವವರು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನವರು, ನಮ್ಮ ಸರ್ಕಾರ ಫೈನಾನ್ಸ್ ಮಾಡುವುದಿಲ್ಲ, ಅಲ್ಲಿ ಚುನಾವಣೆ ಇತ್ತು, ಅಲ್ಲಿರುವ ಬಿ.ಡಿ.ಒ. ಒಬ್ಬ ಡೈರೆಕ್ಟರು ಹಾಗೂ ವೋಟರು. ಅಲ್ಲಿರುವ ಬಿ.ಡಿ.ಒ ಬದಲಾವಣೆ ಮಾಡಿ, ಬದಲಾವಣೆ ಮಾಡಿದ ಆರ್ಡರ್ ಅವರಿಗೆ ಇನ್ನೂ ಹೋಗಿಲ್ಲ, ಹೊಸ ಬಿ.ಡಿ.ಒ. ಕೈಗೆ ಕೊಟ್ಟು ಅವನು ಹೋಗಿ ಅಲ್ಲಿ ವೋಟು ಮಾಡಬೇಕು. ವೋಟು ಮಾಡಿದರು, ಸೊಸೈಟಿಯನ್ನು ಕೈಗೆ ತೆಗೆದುಕೊಂಡರು. ಏಕೆ ಎಷ್ಟೊಂದು ವಿಂಡಿಕ್ಟೀವ್ ಆಗಿ ಮಡುತ್ತಿದ್ದೀರಿ. ಬರೀ ಒಂದು ಸೊಸೈಟಿ ತೆಗೆದುಕೊಳ್ಳುವುದಕ್ಕೆ ಒಬ್ಬ ಬಿ.ಡಿ.ಒ. ಬದಲಾಯಿಸಿ, ಅವನ ಕೈಗೆ ಆರ್ಡರ್ ಕೊಟ್ಟು, ಅವನು ಹೋಗಿ, assumed charge ಎಂದು, ಅಸ್ಯೂಮ್ ಮಾಡಿಕೊಂಡು, ಚಾರ್ಜ್ ಅವನಿಗೆ ಕೊಟ್ಟು ಹೋಗಿ ವೋಟು ಮಾಡುತ್ತಾನೆ. ನಾವು ವಿರೋಧ ಪಕ್ಷದಲ್ಲಿದ್ದೇವೆ. ರಾಮೇಗೌಡರ ಕಾಲದಿಂದಲೂ 15 ವರ್ಷಗಳ ಕಾಲ ಇದ್ದೇವೆ. ನಾನು ತಾಲ್ಲೂಕು

ಬೋರ್ಡ್ ಅಧ್ಯಕ್ಷನಾಗಿದ್ದೆ. ಇಂಡಿಪೆಂಡೆಂಟ್ ಆಗಿ ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆ. ಆಗ ನಾನು ಯಾವ ಸಂಸ್ಥೆಯಲ್ಲೂ ಇರಲಿಲ್ಲ. ಆಗಿನ ಸರ್ಕಾರಗಳು ಇಷ್ಟೊಂದು ವಿಂಡಿಕ್ಟೀವ್ ಆಗಿ ಇರಲಿಲ್ಲ. ನಿಮಗೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತಿದ್ದೇನೆ. ಒಂದು ಸೊಸೈಟಿ ಹೋದರೆ ಏನು ಪ್ರಪಂಚ ಮುಳುಗಿ ಹೋಗುವುದಿಲ್ಲ. ನಮಗೆ ಬೇಕಾಗಿರುವುದು ರೈತನಿಗೆ ಸಹಾಯವಾಗಬೇಕು. ನಾವು ಎಷ್ಟು ಉದಾರವಾಗಿ ಮಾಡಿದ್ದೇವೆಂದರೆ ವಿಶ್ವನಾಥ್‌ರವರು ಈಗ ಅಧ್ಯಕ್ಷರು ಏನಾಗಿದ್ದಾರೆ ಅವರು ಕಾಂಗ್ರೆಸ್‌ನವರು. ನಮಗೆ ಮೆಜಾರಿಟಿ ಇಲ್ಲದೇ ಅವರನ್ನೇ ಅಧ್ಯಕ್ಷರನ್ನಾಗಿ ಕಂಟಿನ್ಯೂ ಮಾಡಿದ್ದೆವು. ಮುಖ್ಯಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ. ನಮಗೆ ಸಂಸ್ಥೆಗಳು ಬೆಳೆಯಬೇಕು. ನಮ್ಮಲ್ಲಿ ಸದ್ಯಕ್ಕೆ ಇಂಥವರು ಇಲ್ಲ, ದಯವಿಟ್ಟು ಇವರನ್ನೇ ಮುಂದುವರಿಸಿ ಎಂದು ಹೇಳಿದ್ದೆವು. ನೀವೂ ಈ ತರದ ಔದಾರ್ಯ ಇಟ್ಟುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಜಾಲಪ್ಪನವರು ಸಹಕಾರ ಮಂತ್ರಿಯಾಗಿದ್ದಾಗ ಪಶುಸಂಗೋಪನಾ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರನ್ನು, ಆಗಿನ ಮಂತ್ರಿಗಳಾದ ವಿಶ್ವನಾಥ ರೆಡ್ಡಿ ಮುದ್ನಾಳ್ ಅವರಿಗೆ ಹೇಳಿ ವರ್ಗಾವಣೆ ಮಾಡಿಸಿದ್ದಾರೆ. ಇವೆಲ್ಲಾ ನಮಗೆ ಗೊತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ : ಅದರ ಬಗ್ಗೆ ಜಾಸ್ತಿ ಮಾತನಾಡುವುದಕ್ಕೆ ನನಗೆ ಇಷ್ಟವಿಲ್ಲ. ಎರಡನೆಯದು ಲಾ ಅಂಡ್ ಆರ್ಡರ್. ಈ ಬಗ್ಗೆ ಎರಡು ನಿಮಿಷ ಹೇಳಿ, ಬಿಟ್ಟುಬಿಡುತ್ತೇನೆ. ನಿನ್ನೆ ಮಾತನಾಡುವಾಗ ಒಂದು ಮಾತು ಹೇಳಿದೆ. ಕಳೆದ ಚುನಾವಣೆಯಲ್ಲಿ ಪೋಲೀಸರನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇವತ್ತು ಯಾರೂ ನಿಮ್ಮ ಮಾತನ್ನು ಕೇಳುವುದಿಲ್ಲ ಎಂದು ಹೇಳಿದೆ. ಎಲ್ಲಿಯವರೆಗೆ ಬಂದಿದೆ ಎಂದರೆ, ಸರ್ಕಾರಿ ಅಧಿಕಾರಿಗಳನ್ನು ಬಟ್ಟೆ ಬಿಚ್ಚಿ ಮೆರವಣಿಗೆ ಮಾಡುವಂತಹ ಸ್ಥಿತಿಗೆ ನಿಮ್ಮ ಲಾ ಅಂಡ್ ಆರ್ಡರ್ ಬಂದಿದೆ. ಇವತ್ತು ಪತ್ರಿಕೆಗಳಲ್ಲಿ ಬಂದಿದೆ, ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ನಿನ್ನೆ ಮಾನ್ಯ ಗೃಹಮಂತ್ರಿಗಳ ಹತ್ತಿರ ಸೂಕ್ಷ್ಮವಾಗಿ ಮಾತನಾಡಿದ್ದೇವೆ. ಜೊತೆಗೆ ಇದನ್ನೂ ಕಳುಹಿಸಿಕೊಡುತ್ತೇನೆ. ಒಬ್ಬ ಸಬ್ ಇನ್ಸ್‌ಪೆಕ್ಟರ್, ಕೃಷ್ಣಪ್ಪ ಎಂಬುವರು ಗೌರಿಬಿದನೂರಿನಲ್ಲಿದ್ದಾರೆ. ಅವನು ಮುಳಬಾಗಿಲು ತಾಲ್ಲೂಕಿನವನು ಅವರು ಮೂರು ಜನ ಅಣ್ಣತಮ್ಮಂದಿರು.

ಮೂರು ವರ್ಷಗಳ ಹಿಂದೆ ಒಬ್ಬ ಮೈಲಾರ ಶಾಸ್ತ್ರಿ ಎಂಬುವವರು ಅವರ ಮನೆಯೊಳಗೆ ಪ್ರತ್ಯಕ್ಷ ಆದ. ಹೇಗೋ ಅವರೂ ಅವರೂ ವಿಶ್ವಾಸ ಬೆಳೆಸಿಕೊಂಡರು. ಬೆಳೆಸಿಕೊಂಡ ಮೇಲೆ ಮೈಲಾರ ಶಾಸ್ತ್ರಿ ಹೇಳಿದ, ನನ್ನಲ್ಲಿ ಡಿವೈನ್ ಪವರ್ ಇದೆ, ನಿಮ್ಮ ಹೊಲದಲ್ಲಿ ಬೇಕಾದಷ್ಟು ಚಿನ್ನ ಇದೆ, ಅದನ್ನು ತೆಗೆದುಕೊಡುತ್ತೇನೆ ಎಂದು ಹೇಳಿದ. ಸಬ್ ಇನ್ಸ್‌ಪೆಕ್ಟರ್ ಪೂಜೆ ಪುರಸ್ಕಾರ ಮಾಡಿಸಿದರು. ಒಂದು ಕಡೆ ಅಗೆದರು, ಸ್ವಲ್ಪ ಚಿನ್ನ ಸಿಕ್ಕಿತು, ಸಿಕ್ಕಿದ್ದು ನಿಜ. ಇದನ್ನು ತಾವು ಸಿ.ಓ.ಡಿ.ಗೆ ಕಳುಹಿಸಬೇಕು. ಮಾನ್ಯ ಗೃಹಮಂತ್ರಿಯವರಿಗೆ, ಮುಖ್ಯಮಂತ್ರಿಯವರಿಗೆ ಕೇಳುತ್ತಿದ್ದೇನೆ. ಇದನ್ನು ಸಿ.ಓ.ಡಿಗೆ ಕಳುಹಿಸಬೇಕು. ಆಮೇಲೆ ಅವನು ಹೇಳಿದ, ಸಬ್‌ಇನ್ಸ್‌ಪೆಕ್ಟರ್ ಕೆಲಸದಲ್ಲಿ ಎತಕ್ಕೆ ಸಾಯುತ್ತೀರಿ, ನೀವು ಡಿ.ಜಿ.ಗಿಂತ ಹೆಚ್ಚಿಗೆ ಇರಬಹುದು. ನನಗೆ ಅವರು ಗೊತ್ತು, ಇವರು ಗೊತ್ತು ಎಂದು ಹೇಳಿ ಒಪ್ಪಿಸಿಬಿಟ್ಟು, ಅವರನ್ನು ಕರೆದುಕೊಂಡು ಹೋಗಿ ಎಲ್ಲಾ ನದಿಗಳಲ್ಲಿ ಸ್ನಾನ ಮಾಡಿಸಿದ, ಎಲ್ಲಾ ಜೀವನದಿಗಳಲ್ಲಿ ಸಮುದ್ರದಲ್ಲಿ ಸ್ನಾನ ಮಾಡಿಸಿದ. ಹೊಲದಲ್ಲಿ ಚಿನ್ನ ಇದೆ ಎಂದು ಅಗೆಯುವುದಕ್ಕೆ ಶುರು ಮಾಡಿದರು. ಆ ಶಾಸ್ತ್ರಿ ಮೊದಲೇ ಏನು ಅರೇಂಜ್‌ಮೆಂಟ್ ಮಾಡಿದ್ದನೋ ಏನೋ ಗೊತ್ತಿಲ್ಲ. ಆ ಊರಿನವರೆಲ್ಲರೂ ರಾತ್ರಿ ಒಂದೂವರೆ ಘಂಟೆಗೆ ಓಡಿ ಬಂದರು. ಅವರೆಲ್ಲರೂ ಅಲ್ಲಿಂದ ಪಲಾಯನ ಮಾಡಿದರು. ಈ ಶಾಸ್ತ್ರಿನೂ

ತಪ್ಪಿಸಿಕೊಂಡ. ಆ ಮೈಲಾರಶಾಸ್ತ್ರಿ ಗೌರಿಬಿದನೂರಿನಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗೆ ನಾನು ಮೈಚಕುನಹಳ್ಳಿಯವನು ಎಂದು ಹೇಳಿದ್ದ. ಆ ಸಬ್‌ಇನ್ಸ್‌ಪೆಕ್ಟರ್ ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಬಂದರು. ಬಂದ ಎಂಟು ದಿವಸದಲ್ಲಿ ಹೋಗಿ ಇವರಪ್ಪ ನಾರಾಯಣಪ್ಪ ಎಂದು ಮತ್ತು ಅವರ ದೊಡ್ಡ ಮಗ ಹನುಮಂತರಾಯಪ್ಪ ಎಂದು, ಒಟ್ಟು ನಾಲ್ಕು ಜನ ಮಕ್ಕಳು ಅವರಿಗೆ. ಈ ಮೈಲಾರಪ್ಪ ಶಾಸ್ತ್ರಿನೂ ಅಲ್ಲ, ಏನೂ ಅಲ್ಲ, ಅವನು ಸುಣ್ಣಕಲ್ಲು ಜಾತಿಗೆ ಸೇರಿದವನು. ಅವನಿಗೆ 18 ಗುಂಟೆ ಜಮೀನು ಇದೆ. ತಂದೆ ಮಕ್ಕಳನ್ನು ಹಿಡಿದುಕೊಂಡು ಬಂದು ಐದು ದಿವಸ ಒಳಗಡೆ ಹಾಕಿ ಚೆನ್ನಾಗಿ ಚಚ್ಚಿದ. ಕಡೆಗೆ ಅಲ್ಲಿನ ಜಿಲ್ಲಾ ಪರಿಷತ್ ಮೆಂಬರ್ ಜ್ಯೋತಿರೆಡ್ಡಿ, ನಂಜುಡರೆಡ್ಡಿ ಎಂಬ ಮಂಡಲ್ ಮೆಂಬರ್ ಹೋಗಿ ಕೈಕಾಲಿಗೆ ಬಿದ್ದರು, ಆದರೂ ಬಿಡಲಿಲ್ಲ, ಐದು ದಿವಸ ಆದಮೇಲೆ ಅವನ ಹತ್ತಿರ ಸ್ಟ್ಯಾಂಪ್ ಪೇಪರ್ ಮೇಲೆ ಒಂದು ಪತ್ರ ಬರೆಸಿಕೊಂಡರು. ಏನೋ ಸೈನ್ ಹಾಕಿಸಿಕೊಂಡು ಸೈನ್ ಅಂದರೆ ಹೆಬ್ಬೆಟ್ಟು ಗುರುತು ಹಾಕಿಸಿಕೊಂಡು ಅವನನ್ನು ಬಿಟ್ಟರು. ಬಿಟ್ಟು ತಿರುಗಿ ಹದಿನೈದು ದಿವಸ ಆದಮೇಲೆ ಪುನಃ ಹನುಮಂತರಾಯಪ್ಪನ್ನು ಹಿಡಿದುಕೊಂಡು ಬಂದರು. ಅವತ್ತು ಹೋದವನು ಹನುಮಂತರಾಯಪ್ಪ ಒಂದೂವರೆ ವರ್ಷ ಆಯಿತು. ಇದುವರೆಗೂ ಮನೆಗೇ ಹೋಗಿಲ್ಲ, ಎಲ್ಲಿಗೆ ಹೋಗಿದ್ದಾನೋ ಗೊತ್ತಿಲ್ಲ. ಈ ಮೈಲಾರಪ್ಪ ಎನ್ನುವವನು ಸುಮಾರು ಎಂಟು ವರ್ಷದ ಹುಡುಗ ಆಗಿದ್ದಾಗ ಮನೆಯನ್ನು ಬಿಟ್ಟು ಹೋದವನು.

ಅವನು ಎಲ್ಲಿದ್ದ ಎನ್ನುವುದೂ ಅವನ ತಂದೆ ತಾಯಿಗಳಿಗೆ ಗೊತ್ತಿಲ್ಲ. ಅವರ ಮೈಯೆಲ್ಲಾ ನೋಡಬೇಕು. ಐದಾರು ದಿವಸದ ಹಿಂದೆ ಬಂದು ನನಗೆ ಕೊಟ್ಟರು. ಇದೆಲ್ಲಾ ನನಗೆ ಗೊತ್ತಿಲ್ಲ, ಮೈಮೇಲೆ ಬಟ್ಟೆ ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮ ಮುಖಂಡರು ಚಂದ್ರೇಗೌಡರು ನೋಡಿದ್ದಾರೆ. ಹೊಟ್ಟೆಗೆ ಊಟ ಇಲ್ಲ. ಕೂಲಿ ಮಾಡಿಕೊಂಡು ತಿನ್ನುವ ಜನ. ಅವರನ್ನು ಹಿಡಿದುಕೊಂಡು ಹೋಗುತ್ತಾರೆ. ಅವರ ಮೇಲೆ ಎರಡು ಪ್ರೈವೇಟ್ ಕೇಸ್ ಹಾಕಿದ್ದಾರೆ. ಇವರು ಆ ಸಬ್‌ಇನ್ಸ್‌ಪೆಕ್ಟರ್‌ಗೆ ನೋಟೀಸ್ ಕೊಟ್ಟು ಅದರ ಕಾಪಿಗಳನ್ನು ಎಲ್ಲಾ ಅಧಿಕಾರಿಗಳಿಗೆ ಕಳುಹಿಸಿದ್ದಾರೆ. ಒಂದೂವರೆ ವರ್ಷ ಆಯಿತು. ಅದರ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ, ಡಿಐಜಿ, ಐ.ಜಿ., ಡಿವೈಎಸ್‌ಪಿ, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಆಗ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರಿಗೆ ಕೊಟ್ಟಿದ್ದಾರೆ. ಇವತ್ತಿನವರೆಗೂ ಏನೂ ಅಕ್ಷನ್ ತೆಗೆದು ಕೊಂಡಿಲ್ಲ, ನಾನು ಇದನ್ನು ಕಳುಹಿಸುತ್ತಿದ್ದೇನೆ. ಸರಕಾರ ಇದೆ ಎನ್ನುವುದಾದರೆ ಕೂಡಲೇ ಅವನನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಸಿ.ಓ.ಡಿ.ಗೆ ರೆಷರ್ ಮಾಡಿರಿ. ನಿಜ ಅಲ್ಲ ಎಂದರೆ ನಾನು ಈ ಸದನದಲ್ಲಿ ಕ್ಷಮಾಪಣೆ ಕೇಳುತ್ತೇನೆ, ಓಪನ್ ಆಗಿ ಕ್ಷಮೆ ಕೇಳುತ್ತೇನೆ, ಬೇಕಾದರೆ ರಾಜೀನಾಮೆ ಕೊಟ್ಟು ಹೊರಟುಹೋಗುತ್ತೇನೆ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ತಮ್ಮ ಮುಖಾಂತರ ಇದನ್ನು ಅವರಿಗೆ ಕಳುಹಿಸಿಕೊಡುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೇ, ಕಡೆಯಲ್ಲಿ ನಮ್ಮ ತಾಲೋಕಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕು. ಕೆಲವು ಕಾಂಗ್ರೆಸ್ ಶಾಸಕರು ಸಾಮಂತ ರಾಜಾರಾಗಿದ್ದಾರೆ. ಎಲ್ಲೆಲ್ಲಿ ಅವರ ಶಾಸಕರು ಇಲ್ಲ ಅಲ್ಲಿಗೆ ಬೇರೆಯವರನ್ನು ಸಾಮಂತರನ್ನಾಗಿ ಕ್ರಿಯೇಟ್ ಮಾಡಿ ಬಿಟ್ಟಿದ್ದಾರೆ. ನಮ್ಮ ತಾಲ್ಲೂಕಿಗೆ ಪಕ್ಕದ ತಾಲ್ಲೂಕಿನಿಂದ ಕಳುಹಿಸಿದ್ದಾರೆ. ಇತ್ತೀಚಿನವರೆಗೂ ಅವರು ರೌಡಿ ಲಿಸ್ಟ್‌ನಲ್ಲಿದ್ದರು. ಈಗ ಎಲ್ಲರನ್ನು ಟಿ.ಬಿ.ಗೆ ಕರೆಸುತ್ತಾರೆ. ಪೋಲೀಸ್ ಇನ್ಸ್‌ಪೆಕ್ಟರನ್ನು, ಸಬ್‌ಇನ್ಸ್‌ಪೆಕ್ಟರನ್ನು ಕರೆಸುತ್ತಾರೆ. ಪ್ರತಿಯೊಬ್ಬರನ್ನು ಕಂಟ್ರೋಲ್ ಮಾಡುತ್ತಿದ್ದಾರೆ. ಇವತ್ತು ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಆಕ್ಟ್ ಪ್ರಕಾರ ಪ್ರಧಾನರ ಮೇಲೆ, ಉಪಾಧ್ಯಾಯರ ಮೇಲೆ ಎಲ್ಲರ ಮೇಲೆ ಕೇಸ್ ಹಾಕುತ್ತಿದ್ದಾರೆ. ಯಾರು ಯಾರು ನಮ್ಮ ಪಕ್ಷಕ್ಕೆ ಸೇರಿದ್ದಾರೆ ಅವರ ಮೇಲೆಲ್ಲಾ ಹಾಕುತ್ತಿದ್ದಾರೆ. ಸ್ವಾಮಿ ದಯವಿಟ್ಟು ಇದನ್ನು ತಪ್ಪಿಸುತ್ತೀರಾ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಧರ್ಮಸಿಂಗ್‌ರವರಿಗೆ, ಖರ್ಗೆಯವರಿಗೆ ಇದು ಗೊತ್ತಿದೆ. ಅವರ ಹೆಸರನ್ನು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ, ಅವರು ನಿಮ್ಮ ಪಕ್ಷದ ಮುಖಂಡರಲ್ಲಿ ಒಬ್ಬರು. ನಾನು ಅವರ ಹೆಸರು ಹೇಳುವುದಿಲ್ಲ. ನೀವು ಕಂಟ್ರೋಲ್ ಮಾಡದೇ ಹೋದರೆ ನಾವು ಮಾಡಬೇಕಾಗುತ್ತದೆ. ಅವರಿಗಾಗಿ ಪೋಲೀಸ್ ಇನ್‌ಸ್ಪೆಕ್ಟರ್ ದಾರಿಯಲ್ಲಿ ಕಾಯುತ್ತಿರುತ್ತಾರೆ. ಪೋಲೀಸ್ ಇನ್‌ಸ್ಪೆಕ್ಟರ್‌ಗಳು ಬೇರೆ ಬೇರೆ ಸಬ್ ಇನ್‌ಸ್ಪೆಕ್ಟರ್‌ಗಳು ಕೇಸ್ ರಿಜಿಸ್ಟಾರ್ ಮಾಡಿದರೆ, ಏತಕ್ಕೆ ಮಾಡಿದೆ, ನನ್ನ ಕೇಳದೇ ಮಾಡಕೂಡದು ಎಂದು ಹೇಳುತ್ತಾರೆ. ಒಬ್ಬ ಸಬ್‌ಇನ್‌ಸ್ಪೆಕ್ಟರ್ ಹೇಳಿದ, ನನ್ನ ಕೆಲಸ ನಾನು ಮಾಡಿದ್ದೇನೆ, ನಾನು ಬಟ್ಟೆ ಹಾಕಿಕೊಂಡಿದ್ದೇನೆ, ಪ್ರಮಾಣವಚನ ಸ್ವೀಕಾರ ಮಾಡಿದ್ದೇನೆ, ನನ್ನ ಕೆಲಸ ನಾನು ಮಾಡುತ್ತೇನೆ. ನಿಮಗೆ ಇಷ್ಟ ಇಲ್ಲದಿದ್ದರೆ ನನ್ನನ್ನು ಟ್ರಾನ್ಸ್‌ಫರ್ ಮಾಡಿಸಿ ಎಂದು ಹೇಳುತ್ತಾರೆ. ಈ ಸ್ಥಿತಿಗೆ ನಿಮ್ಮ ಇನ್‌ಸ್ಪೆಕ್ಟರ್ಸ್ ಬಿಹೇವ್ ಮಾಡುತ್ತಿದ್ದಾರೆ. ನಮ್ಮ ತಾಲೋಕಿನಲ್ಲೂ ಯಾವ ವರ್ಷದಲ್ಲೂ ಯಾವತ್ತೂ ಈ ರೀತಿ ಅರಾಜಕತೆ ಇರಲಿಲ್ಲ. ಈಗ ಅರಾಜಕತೆ ಪ್ರಾರಂಭವಾಗಿದೆ. ಇದರಿಂದ ಸರಕಾರ ಇದೆಯೆಂದು ಹೇಳೋಣವೇ, ಇಲ್ಲ ಎಂದು ಹೇಳೋಣವೇ ದಯವಿಟ್ಟು ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡದೇ ಹೋದರೆ ಕಾನೂನನ್ನು ನಾವು ಕೈಗೆ ತೆಗೆದುಕೊಳ್ಳಬೇಕಾಗುತ್ತದೆ. ನಾವು ಹೆದರಬೇಕಾದುದು ಅನಾವಶ್ಯಕ ಎಲ್ಲಿಯವರೆಗೆ ನಾವು ಆತ್ಮಶುದ್ಧಿ ಇಟ್ಟುಕೊಂಡಿರುತ್ತೇವೆಯೋ, ಎಲ್ಲಿಯವರೆಗೆ ಕೈಯಿ, ಬಾಯಿ ಶುದ್ಧಿ ಇಟ್ಟುಕೊಂಡಿದ್ದೇವೆಯೋ, ಅಲ್ಲಿಯವರೆಗೆ ಯಾರಿಗೂ ಹೆದರ ಬೇಕಾದುದು ಅನಾವಶ್ಯಕ.

ನಾನು ಏತಕ್ಕೆ ಇದರ ಬಗ್ಗೆ ಮಾತನಾಡುವುದಕ್ಕೆ ಪ್ರಯತ್ನ ಪಟ್ಟೆ ಅಂದರೆ, ಈ ಕೆಲವು ವಿಷಯಗಳನ್ನು ಹೇಳುವುದಕ್ಕ. ನಾನು ಇನ್ನೊಂದು ಸಾರಿ ಹೇಳುತ್ತೇನೆ. ಸನ್ಮಾನ್ಯ ಬಂಗಾರಪ್ಪನವರು ಕೆಲವು ಅವರೇ ಸ್ವಯಂ ಕೃತ್ಯಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಪ್ರತಿಯೊಬ್ಬ ಅಭ್ಯರ್ಥಿಯನ್ನೂ ಗೆಲ್ಲಿಸಬೇಕೆಂದು ಧಾರಾಳವಾಗಿ ದುಡ್ಡು ಕೊಟ್ಟರು ಪಾಪ, ದುಡ್ಡು ಹಂಚಿದರು. ಅವರೆಲ್ಲರೂ ಇವತ್ತು ವಿಶ್ವಾಸ ಕಳೆದುಕೊಂಡಿದ್ದಾರೆ. ಅವರಿಗೆ ವಿರೋಧವಾಗಿದ್ದಾರೆ. ಶಾಸಕರೂ ಅರ್ಧ ಜನ ಅವರಿಗೆ ವಿರೋಧವಾಗಿದ್ದಾರೆ. ಆದ್ದರಿಂದ ಜನಗಳ ವಿಶ್ವಾಸವಾದರೂ ತಾವು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಿ ಎಂದು ಹೇಳಿ ಈ ಅವಿಶ್ವಾಸ ನಿರ್ಣಯಕ್ಕೆ ಪೂರ್ಣ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ವಿರೋಧ ಮಾಡಿದ್ದರೆ ಏನಾಗುತ್ತಿತ್ತು.

ಶ್ರೀ ಆರ್.ಎಲ್. ಜಾಲಪ್ಪ: ಬಂಗಾರಪ್ಪ ಹೋದರೆ ಇನ್ನೊಬ್ಬರು ಬೆಳ್ಳಿಯಪ್ಪ ಬರಬಹುದು ಇನ್ನೊಬ್ಬರು ತಾಮ್ರದಪ್ಪ ಬರಬಹುದು. ನಿಮ್ಮ ಶನಿ ಸಂತಾನ ಹೋಗಲಿ, ಕಾಂಗ್ರೆಸ್ ಹೋಗಲಿ ಎನ್ನುವವರು ನಾವು.

ಶ್ರೀ ಅಂಜನ ಮೂರ್ತಿ : ಮಹಾಜನತೆ ದೊಡ್ಡ ಶನಿಸಂತಾನ ತೊಲಗಿಸಿದರಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಕೆ.ಎಚ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಮಾನ್ಯ ಮೊಯ್ಲಿಯವರು ನನಗೆ ಹೇಳಿದರು. ಮಾನ್ಯ ಚಂದ್ರೇಗೌಡರು ಮಾತನಾಡುತ್ತಾ ಒಂದು ವಿಷಯ ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಯಾವುದೋ ಒಂದು Association of housing co-operative society, Bangalore. ಅವರು ಕೊಟ್ಟ ಒಂದು ಕಾಪಿಯನ್ನು ಓದಿದರು ಎಂದು. ಇದರಲ್ಲಿ ನಾನು ಉಳಿದಿದ್ದನ್ನು ಡಿಟೇಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ, ಮುಖ್ಯಮುಂತ್ರಿಗಳು ಉತ್ತರ ಕೊಡುತ್ತಾರೆ. ಒಂದು ಮಾತನ್ನು ಹೇಳುತ್ತೇನೆ. ಲ್ಯಾಂಡ್ ಅಕ್ವಿಜೇಶನ್ ಮಾಡಲಿಕ್ಕೆ 160 ಕೋಟಿ ರೂಪಾಯಿಗಳ ಲ್ಯಾಂಡ್

ಅಕ್ವಿಜೇಶನ್ ಮಾಡುತ್ತೇವೆಂದು ಇದರಲ್ಲಿ ಬರೆದಿದ್ದಾರೆ. ಅದಕ್ಕೆ ಮಿನಿಸ್ಟರ್ ಬಹಳ ತಡ ಮಾಡಿದರೆಂದು ಹೇಳಿದರು. ಮಿನಿಸ್ಟರ್ ಮೊದಲಿನಿಂದಲೂ ತಡಮಾಡಿದ್ದೇನೋ ನಿಜ. ಏತಕ್ಕೆ ತಡ ಮಾಡಿದರು ಎನ್ನುವುದನ್ನು ತಾವು ಫೈಲ್ ನೋಡಿದರೆ ಗೊತ್ತಾಗುತ್ತದೆ. ನಾನು ಬಂದ ಮೇಲೆ ಕ್ವಿಕ್ ಆಕ್ಷನ್ ತೆಗೆದುಕೊಂಡಿದ್ದೇನೆ.

ನನ್ನ ಎದುರು ಯಾವತ್ತೂ ಫೈಲ್ ಬಂತೋ ಅವತ್ತೇ ನಾನು ಆಕ್ಷನ್ ತೆಗೆದುಕೊಂಡಿದ್ದೇನೆ. ಆಮೇಲೆ ಇದರಲ್ಲಿ

"As required under the land acquistion Act, the societies were asked to remit huge funds out of the collections made from the responsible members"

ನನ್ನಲ್ಲಿ ಈಗ ಫೈಲ್ ಇಲ್ಲ. ನನಗೆ ನೆನಪು ಇದ್ದಂತೆ ಹೇಳುವುದಾದರೆ, ವೈಯಾಲಿಕಾವಲ್ ಹೌಸಿಂಗ್ ಸೊಸೈಟಿಯವರದ್ದು 42 ಕೋಟಿ ರೂಪಾಯಿಗಳು ಕೂಡಿಸಿದ್ದಾರೆ. ಅದರಲ್ಲಿ 22 ಕೋಟಿ ರೂಪಾಯಿಗಳು ಆಡಿಟ್ ವರದಿ ಮೇಲೆ ಮತ್ತು ನನ್ನ ಮನಸ್ಸಿಗೆ ಸಮಾಧಾನವಾಗಿರುವ ಹಾಗೆ ಮಿಸ್ ಅಪ್ರೊಪ್ರಿಯೇಶನ್ ಆಗಿದೆ. ಇದನ್ನು ನಾನು ತಕ್ಷಣ ಸೂಪರ್‌ಸೀಡ್ ಮಾಡಿದ್ದೇನೆ. ಇದಕ್ಕಿಂತ ಹೆಚ್ಚು ಏನನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಯಾವುದೇ ರೀತಿಯಲ್ಲಿ ಇದರಲ್ಲಿ ಡೀಲೆ ಮಾಡಿದ್ದಾರೆ ಈ ಸದನದ ಯಾವುದೇ ಕಮಿಟಿಯನ್ನು ನೇಮಿಸಿ ನನ್ನ ಮೇಲೆ ಆಕ್ಷನ್ ತೆಗೆದುಕೊಳ್ಳಬಹುದು.

ಶ್ರೀ ಆರ್. ಎಲ್. ಜಾಲಪ್ಪ: ಅವರು ಅದನ್ನು ರೆಫರ್ ಮಾಡಿ ನಿಮ್ಮ ಮೇಲೆ ಕೆಲವು ಚಾರ್ಜಸ್ ಮಾಡಿದ್ದರು. we know, everybody in this house. about you.

ಅಂತಹ ಒಂದು ಕಮ್ಯಾಂಡಿಂಗ್ ಪೊಜಿಶನ್‌ನಲ್ಲಿ ಆ ಸಂಸ್ಥೆಗಳು ಇವೆಯೆಂದು ಅವರು ಹೇಳಿದ್ದಾರೆ, ಅಷ್ಟೇ ವಿನಃ not to making any allegations against you.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗೈರುಹಾಜರಿಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಅದನ್ನು ಒಂದೇ ಒಂದು ವಾಕ್ಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಏನು ಪತ್ರವನ್ನು ಬರೆದಿದ್ದರು ಆ ಪತ್ರವನ್ನು ತಾವು ನೋಡಿದ್ದೀರಿ. ಪೇಜ್ 2ರ ಕೊನೆಯ ಒಂದು ವಾಕ್ಯವನ್ನು ತಾವು ಓದಬೇಕು.

" The Association is in know of malafidy intentions behind these severe punishment meted out to few housing co-operative societies in order to exploit them for personal benefits but we would not like to elaborate much on this mystery for the time being and shall expose it at an appropriate time."

ಈ ವಾಕ್ಯ ಏನು ಬರೆದಿದ್ದಾರೆ ಅದನ್ನು ನಾನು ಈ ಸದನದ ಗಮನಕ್ಕೆ ತಂದಿದ್ದೇನೆ, ಮತ್ತು ತಮ್ಮ ಗಮನಕ್ಕೂ ತರುತ್ತಿದ್ದೇನೆ. ಈ ಮಾತನ್ನು ಹೇಳುವಂತಹ ದಾರ್ಷ್ಟ್ಯ ಅವರಿಗೆ ಇದೆ ಎನ್ನುವ ಮಾತನ್ನು ನಾನು ಪ್ರಾಸ್ತಾಪಿಕವಾಗಿ ಮಾತನಾಡುತ್ತಾ ರೆಫರ್ ಮಾಡಿದ್ದೇನೆ.

ಮುಖ್ಯಮಂತ್ರಿಗಳಿಂದ ಉತ್ತರ

+ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಮಾನ್ಯ ಸದಸ್ಯರು ನನ್ನ ಮುಖಂಡತ್ವದಲ್ಲಿರತಕ್ಕಂಥ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ಈ ಸದನದಲ್ಲಿ ಮಂಡನೆ ಮಾಡಿ ಸದನದ ಒಪ್ಪಿಗೆಗಾಗಿ ತಮ್ಮಲ್ಲೇ ಆಗಿರತಕ್ಕಂಥ